ಬೃಂದಾವನ ಕನ್ನಡ ಕೂಟ ,ನ್ಯೂ ಜೆರ್ಸಿ ದ್ವೈಮಾಸಿಕ ಪತ್ರಿಕೆ ಸಂಚಿಕೆ ೨೮ , ಜೂನ್ ೨೦೨೦

# ಬೃಂದಾವನ ವಾಣಿ



## *ಈ ಸಂಚಿಕೆಯಲ್ಲಿ*


ಸಂಪಾದಕೀಯ ............೩

ಅಧ್ಯಕ್ಷರ ನುಡಿ ............೪

ಕೊರೋನಾ ಯೋಧರಿಗೆ ನುಡಿ ನಮನ ............೬

ವಸಂತ ಬರೆದನು ಒಲವಿನ ಓಲೆ ............೭

ಮೆಮೋರಿಯಲ್ ಡೇ ಆಚರಣೆ ............೧೦

ಮರೆಯಲಾಗದ ಬಾಲ್ಯದ ನೆನಪು ............೧೧

ನಾಡೋಜರಿಗೆ ಗುರು ನಮನ ............೧೨

ಹನುಮ ಮತ್ತು ಕೊರೋನಾ ............೧೩

ಮಗು ಬಂದ ಮನೆ ............೧೪

ಭಗವಂತನ ನ್ಯಾಯ ............೧೫

ಜೀ ಮೈನಸ್ ಒನ್ ............೧೬

ಕವನ—ಹಸಿರ ಕೊಡುಗೆ ............೧೯

ಅಮ್ಮಂದಿರ ದಿನ-ಅಪ್ಪಂದಿರ ದಿನದ ಕವನಗಳು—೨೦

ರಸಪಾಕ—ಕೋಡುಬಳೆ ............೨೭

ರಸಪಾಕ—ಮಾವಿನ ಕಾಯಿ ಚಟ್ನಿ ............೨೮

ನರಸಿಂಹ ಜಯಂತಿಯ ವಿಶೇಷತೆ ............೨೯

ಚೆಣ್ಣರ ಚಿತ್ತಾರ ............೩೧

ಛಾಯಾ ಚಿತ್ರಗಳು ............೩೪


(ಅಂಕಣ ಚಿತ್ರ ಕೃಪೆ—ಲೇಖಕರು ಮತ್ತು ಅಂತರ್ಜಾಲ)

ಮುಖಪುಟ :ವಿನ್ಯಾಸ—ಪ್ರಶಾಂತ್ ಮುರುಗೇಂದ್ರಪ್ಪ. . ಚಿತ್ರ— *"ಇಂಡಿಯಾ ಗೇಟ್ ಕಾರಂಜಿ, ಹೊಸದಿಲ್ಲಿ"* (ಕೃಪೆ—ಅಂತರ್ಜಾಲ),


ಬೃಂದಾವನ ವಾಣಿಯ ಓದುಗರೆಲ್ಲರಿಗೂ ನಮಸ್ಕಾರಗಳು.

ಈ ವರ್ಷ, ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಹಮ್ಮಿಕೊಂಡು ಉತ್ಸಾಹದಿಂದ ಬೇಸಿಗೆಯ ಬರುವಿಕೆಯನ್ನು ಆಶಿಸಿದ್ದ ನಮಗೆಲ್ಲ ನಿರಾಶೆ ಉಂಟಾಗುವಂತೆ ಕೊರೋನಾ ವೈರಸ್ಸಿಗೆ ಸಂಬಂಧಿಸಿದ ಕ್ವಾರಂಟೈನ್ ವ್ಯವಸ್ಥೆ, ಸಾಮಾಜಿಕ ಮತ್ತು ಭೌತಿಕ ಅಂತರಗಳನ್ನು ಕಾಯ್ದುಕೊಳ್ಳುವ ಪ್ರಕ್ರಿಯೆ ಇನ್ನೂ ಮುಂದುವರೆಯುತ್ತಿದೆ. ಪ್ರಪಂಚಾದಾದ್ಯಂತ ಎಲ್ಲ ದೇಶಗಳೂ ಬೆಚ್ಚಿ ಬೀಳುವಂತಹ ಬೆಳವಣಿಗೆಗಳನ್ನು ನಾವು ಈಗಾಗಲೇ ಗಮನಿಸಿದ್ದು, ಇನ್ನೂ ಈ ವರ್ಷದಲ್ಲಿ ಏನೇನನ್ನು ನೋಡಬೇಕೋ ಎಂದು ಸೋಜಿಗಗೊಳ್ಳುವಂತಾಗಿದೆ. ಒಟ್ಟಿನಲ್ಲಿ ಈ ವರ್ಷದ ಲೆಕ್ಕಾಚಾರಗಳೆಲ್ಲ ತಲೆಕೆಳಗಾಗುವಂತೆ ಮಾಡಿರುವ ಈ ಕೊರೋನಾ ವೈರಸ್ ಹಾವಳಿಯನ್ನು ವಿಧಿ ಲಿಖಿತ ಎಂದು ಎಲ್ಲರೂ ಅಂದುಕೊಂಡು ನಿಟ್ಟುಸಿರು ಬಿಡುವಂತಾಗಿದೆ ಅಷ್ಟೇ.

ಕೊರೋನಾ ವೈರಸ್ಸಿನ ಹಾವಳಿ ಕಡಿಮೆ ಎಂದುಕೊಳ್ಳುವ ಹಾಗೆ ಅದನ್ನು ಆಧರಿಸಿ ಅನೇಕ ತೊಂದರೆಗಳು ತಂಡೋಪತಂಡವಾಗಿ ಬಂದವು: ದಾಖಲೆ ನಿರುದ್ಯೋಗದ ಬೆಳವಣಿಗೆ, ಕೆಲವು ಉದ್ಯಮಗಳು ನೆಲಕಚ್ಚುವ ಸ್ಥಿತಿ ತಲುಪಿದವು, ಸ್ವೇಚ್ಛೆಯಿಂದ ಓಡಾಡಿಕೊಂಡಿದ್ದವರ ಸ್ವಾತಂತ್ರ್ಯ ಹರಣವಾಯಿತು, ಎಷ್ಟೋ ಮಕ್ಕಳು ತಮ್ಮ ಶಾಲೆಯ ಅರ್ಧದಷ್ಟು ಭಾಗವನ್ನು ಆನ್‌ಲೈನ್ ಮಾಧ್ಯಮದಲ್ಲೇ ಮಾಡಿ ಮುಗಿಸಿದವು... ಜೊತೆಗೆ ಹೆಚ್ಚಿನವರಿಗೆ ಮನೆಯಿಂದಲೇ ಕೆಲಸ ಮಾಡುವ ಭಾಗ್ಯ ಪರ್ಮನೆಂಟ್ ಆಗಿ ಬಂದು ಹೋಯಿತು. ಇವಿಷ್ಟೇ ಇದ್ದರೆ ಸಾಕಿತ್ತು, ಬೆಂಕಿಯ ಮೇಲೆ ಉಪ್ಪು ಸುರಿಯುವ ಹಾಗೆ ಜನಾಂಗೀಯ ಬೇಧ ನೀತಿಗೆ ಗಲಬೆಗಳು ಆರಂಭವಾಗಿ, ಅಮೇರಿಕದ ಅನೇಕ ನಗರಗಳು ಮತ್ತೊಮ್ಮೆ ಬುಗಿಲೆದ್ದು ಹೊತ್ತಿ ಉರಿದವು, ಜೊತೆಗೆ ಬಡವ-ಬಲ್ಲಿದರ ಅಂತರವೂ ಹೆಚ್ಚಾಗುತ್ತಲೇ ಹೋಯಿತು. ಇದೇ ಸಮಯಕ್ಕೆ ಭಾರತದಲ್ಲಿ ಈಗಿರುವ ಸಮಸ್ಯೆಗಳು ಸಾಲದೆಂಬಂತೆ ಒಂದು ಕಡೆ ಚೀನಾ ಕಾಲೆಳೆದು ಜಗಳಕ್ಕೆ ಬಂದಿದೆ, ಮತ್ತೊಂದು ಕಡೆ ಉಗ್ರರ ಅಟ್ಟಹಾಸ ಮುಂದುವರೆಯುತ್ತಲೇ ಇದೆ. ಈ ಕೊರೋನಾದಿಂದ ಕೊರಗದ ವ್ಯವಸ್ಥೆ ಎಂದರೆ ಭಯೋತ್ಪಾದನೆ ಒಂದೇ!

ಭಾರತದ ಕೊರೋನಾ ನಿಗ್ರಹ ವ್ಯವಸ್ಥೆಯನ್ನು ಮೆಚ್ಚಲೇ ಬೇಕು. ಅಲ್ಲಿನ ಜನಸಾಂದ್ರತೆಗೆ ಹೋಲಿಸಿದರೆ ಸೋಂಕಿತರ ಸಂಖ್ಯೆ ಬಹಳ ಕಡಿಮೆ ಇರುವುದು ಗೊತ್ತಾಗುತ್ತದೆ. ಆದರೆ, ಈ ವೈರಸ್ಸು ಮತ್ತೆ ಮರುಕಳಿಸಬಹುದು. ಎಲ್ಲಿಯವರೆಗೆ ಒಂದು ಸೂಕ್ತವಾದ ವ್ಯಾಕ್ಸೀನ್ ಇರುವುದಿಲ್ಲವೋ ಅಲ್ಲಿಯವರೆಗೆ ಈ ರೀತಿಯ ಹೆದರಿಕೆ ಇದ್ದದ್ದೇ. ಭಾರತದ ಮೆಟ್ರೋ ಪ್ರದೇಶಗಳನ್ನು ಹೊರತು ಪಡಿಸಿದರೆ, ಉದ್ದಗಲದ ಹಳ್ಳಿಹಳ್ಳಿಗೂ ಕರೋನಾ ವೈರಸ್ ಪಸರಿಸುವ ಭೀತಿ ಕಡಿಮೆ ಆದರೆ, ಕೆಲವೊಂದಿಷ್ಟು ಜನರ ಬೇಜವಾಬ್ದಾರಿತನದಿಂದಲೋ, ಭ್ರಷ್ಟಾಚಾರಿಗಳಿಂದಲೋ ಜನಸಾಂದ್ರಣೆ ಇರುವ ನಗರಗಳಿಗೆ ರೋಗ ಹರಡತೊಡಗಿತೆಂದರೆ, ಅದರಷ್ಟು ಕರಾಳವಾದ ಆಘಾತ ಇನ್ನೊಂದಿರಲಾರದು. ನಾವೆಲ್ಲರೂ ಈಗ ಹೊಸತಾಗಿ ಹೊರಗಿನ ಪ್ರಪಂಚವನ್ನು ನೋಡುವ ಹಾಗಿದೆ, ಇನ್ನು ಮುಂದೆ ಅನೇಕ ವರ್ಷಗಳ ಕಾಲ ನಮ್ಮ "ಓಪನ್ ಆಫೀಸ್ ಸ್ಪೇಸ್" ಅನ್ನುವುದು ಕಲ್ಪನೆಯೇ ಸರಿ. ಇದು ಇಲ್ಲಿಗೆ ಮುಗಿದರೆ ಸಾಕಪ್ಪಾ ಎನ್ನುವ ನಿಟ್ಟಿನಲ್ಲಿ ನಾವು ಪ್ರಾರ್ಥನೆಗಳನ್ನು ಸಲ್ಲಿಸುತ್ತಿರುವಾಗ ಮುಂದಿನ ಶೈಕ್ಷಣಿಕ ವರ್ಷ ಹೇಗೆ ಶುರುವಾಗುವುದೋ ಎಂದು ನಮ್ಮ ಶಾಲಾ ಮಕ್ಕಳೆಲ್ಲ ಯೋಚಿಸುವಂತಾಗಿದೆ. ಈ ಕೊರೋನಾದ ಕೃಪೆಯಿಂದ ನಮ್ಮಲ್ಲಿ ಅನೇಕರು ತಮ್ಮ ತಮ್ಮ ಹವ್ಯಾಸಗಳನ್ನು ಮುಂದುವರೆಸಿಕೊಂಡು ಬರುತ್ತಿರುವುದು ಒಂದು ಶ್ಲಾಘನೀಯ ಬೆಳವಣಿಗೆ. ಈ ನಿಟ್ಟಿನಲ್ಲಿ ನಮ್ಮ ಅನೇಕ ಓದುಗರಿಗೆ, ಬರಹಗಾರರಿಗೆ ಮತ್ತು ಅನೇಕ ಹವ್ಯಾಸಿಗರಿಗೆ ಸಾಕಷ್ಟು ಸಮಯ ಸಿಗುತ್ತಿದೆ ಎಂದು ಹೇಳಬಹುದು.

ಈ ಕಂತಿನ ಬೃಂದಾವನ ವಾಣಿಯಲ್ಲಿ ಇನ್ನೂ ಕರೋನಾದ ಛಾಯೆ ಇದೆ. ಜನರ ಅನುಭವ ಸ್ಫುಟಗೊಳ್ಳುತ್ತಾ ಹೋದಂತೆ ನಮ್ಮ ಹಾಡು-ಹಸೆಗಳಲ್ಲಿ ಈ ಕಹಿ ಅಥವಾ ಹೊಸ ಅನುಭವವೂ ಹಾಸುಹೊಕ್ಕಾಗಿ ತೊಡಗಿಕೊಳ್ಳುವುದು ಸಹಜ. ಅದು ನಮ್ಮ ದೈನಂದಿನ ಮಾತು-ಕಥೆ-ಬರಹ-ವಿಚಾರಗಳಲ್ಲಿ ಪ್ರತಿಫಲನಗೊಳ್ಳುವಂತೆ ಈ ಬರಹಗಳಲ್ಲೂ ನೀವು ಕಾಣಬಹುದು. ನಮ್ಮ ಕರೆಗೆ ಓಗೊಟ್ಟು ನಿರೀಕ್ಷೆಗಿಂತ ಹೆಚ್ಚು ಲೇಖನಗಳನ್ನು ಕಳುಹಿಸಿದ ಎಲ್ಲ ಬರಹಗಾರರಿಗೂ ನಮ್ಮ ಹೃದಯಪೂರ್ವಕ ಧನ್ಯವಾದಗಳು. ಈ ಸಂಚಿಕೆಯನ್ನು ನಿಮ್ಮ ಬಂಧು-ಮಿತ್ರರೊಡನೆ ಹಂಚಿಕೊಳ್ಳಿ ಹಾಗೂ ಈ ಸಂಚಿಕೆಯ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಖಂಡಿತವಾಗಿ ತಿಳಿಸಿ.



**ಸಂಪಾದಕ ಮಂಡಳಿ:**

**ದಾಶರಥಿ ಘಟ್ಟು, ಅಜೇಯ ರಾವ್, ಶ್ರೀವಿದ್ಯಾ ಪ್ರಶಾಂತ್, ರಘುರಾಂ ರಾಯಸಂ**








ಅಧ್ಯಕ್ಷರ ನುಡಿ

ಬೃಂದಾವನ ಕನ್ನಡ ಬಂಧುಗಳಿಗೆ ನಮಸ್ಕಾರಗಳು.

ನಾವೆಲ್ಲ ಅಂದುಕೊಂಡಂತೆ ಈ ವರ್ಷ ಅನೇಕ ರೀತಿಯಲ್ಲಿ ವಿಶೇಷವಾದ ವರ್ಷ. ವರ್ಷದ ಮೊದಲ ಮೂರು ತಿಂಗಳುಗಳಲ್ಲಿ ಆರಂಭವಾದ ಕೊರೋನಾ ವೈರಸ್ಸಿನ ಹಾವಳಿ ನಾವು ಆಶಿಸಿದಂತೆ ಇನ್ನೂ ಮುಗಿಯದೆ, ಮತ್ತೆ ಎಲ್ಲಾ ಕಡೆಗೆ ಹರಡಬಹುದಾದ ಭಯದ ನೆರಳಲ್ಲಿ ಬದುಕಬೇಕಾಗಿ ಬಂದಿದೆ. ನಾವು ಈ ಸೂಕ್ಷ್ಮ ಅಥವಾ ಕ್ಷುದ್ರ ಜೀವಿಗಿಂತ ಎಷ್ಟೋ ಪಟ್ಟು ಹೆಚ್ಚಿನ ಬುದ್ಧಿವಂತರೇ ಇರಬಹುದು, ಆದರೆ ಸರಿಯಾದ ಲಸಿಕೆ ಮತ್ತು ಔಷಧಿಗಳಿಲ್ಲದೆ ಒಂದು ರೀತಿಯ ಅಸಹಾಯಕತೆ ಎಲ್ಲಾ ಕಡೆ ಮನೆ ಮಾಡಿದೆ. ಬರುವ ಬೇಸಿಗೆಯ ದಿನಗಳಲ್ಲಿ ಸೋಂಕು ಕಡಿಮೆಯಾಗಿ ನಮ್ಮೆಲ್ಲರ ದೈನಂದಿನ ಚಟುವಟಿಕೆಗಳು ಮೊದಲಿನ ಹಾಗೆ ಸಹಜ ಸ್ಥಿತಿಗೆ ಬರುವಂತಾದರೆ ಸಾಕು ಎನ್ನುವಂತಾಗಿದೆ.


ಈ ಕೊರೋನಾ ವೈರಸ್ಸಿನ ಪರಿಣಾಮದಿಂದ ನಾವೆಲ್ಲ ಮೊಟ್ಟ ಮೊದಲನೆಯ ಬಾರಿಗೆ ಬೃಂದಾವನದ ವಸಂತೋತ್ಸವವನ್ನು ಆಚರಿಸುವ ಸಂಭ್ರಮವನ್ನು ಕಳೆದುಕೊಂಡೆವು. ಈ ಕಾರ್ಯಕ್ರಮಕ್ಕೆಂದೇ ಅನೇಕ ಮಕ್ಕಳು ಹಲವಾರು ವಾರಗಳಿಂದ ತಯಾರು ಮಾಡಿಕೊಂಡು ಬಂದ ಕಾರ್ಯಕ್ರಮಗಳು ನೆನೆಗುದಿಗೆ ಬಿದ್ದವು. ಫಿಜ್ಹಿಕಲ್ ಮತ್ತು ಸೋಶಿಯಲ್ ಡಿಸ್ಟೆನ್ಸಿಂಗ್ ಕಾರಣದಿಂದಾಗಿ ನಾವು ಜನವರಿಯ ಸಂಕ್ರಾಂತಿಯ ತರುವಾಯ ಬೇರೆ ಯಾವುದೇ ಕಾರ್ಯಕ್ರಮವನ್ನು ಮಾಡಲಾಗಲಿಲ್ಲ ಎಂಬ ಕೊರಗು ನಮ್ಮೆಲ್ಲರಲ್ಲೂ ಇದೆ. ಆದರೆ, ಆನ್‌ಲೈನ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಲ್ಲಿ ಎಲ್ಲರಿಗಿಂತ ನಾವು ಮೊದಲಿಗರು ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಅನೇಕ ಮಾಹಿತಿ ಮತ್ತು ಮನರಂಜನೆ ಕಾರ್ಯಕ್ರಮಗಳನ್ನು ಹದಿನೈದು ವಾರಗಳಿಂದ ನಡೆಸಿಕೊಂಡು ಬರುವಲ್ಲಿ ಸೌರಭ ತಂಡದ ಪದಾಧಿಕಾರಿಗಳು ಸಾಕಷ್ಟು ಶ್ರಮ ಪಟ್ಟಿದ್ದಾರೆ. ಅಲ್ಲದೇ, ಇನ್ನು ಮುಂದೆಯೂ ಹಲವಾರು ಮಾಹಿತಿ-ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಸೌರಭ ತಂಡ ನಿರತವಾಗಿದೆ ಎಂದು ತಿಳಿಸಲು ಸಂತೋಷವಾಗುತ್ತದೆ.

ಇಡೀ ವಿಶ್ವವೇ ಸಂಕಷ್ಟದಲ್ಲಿರುವಾಗ ನಮ್ಮ ಕೈಲಾದ ಸಹಾಯ ಮಾಡುವುದು ಸಹಜ ಧರ್ಮ. ಈ ನಿಟ್ಟಿನಲ್ಲಿ ನಮ್ಮ ಬೃಂದಾವನ ಸಮುದಾಯದಿಂದ ನಾವೆಲ್ಲರೂ ಅನೇಕ ರೀತಿಯಲ್ಲಿ ಸಹಾಯ ಮಾಡಿದ್ದೇವೆ. ಮೀಲ್ಸ್ ಆನ್ ವೀಲ್ಸ್ ಸಂಸ್ಥೆಯ ಸಹಾಯಾರ್ಥವಾಗಿ ದೇಣಿಗೆಯನ್ನು ಸಂಗ್ರಹಿಸಿದ್ದೇವೆ. ಹಾಗೂ ಕರ್ನಾಟಕದಲ್ಲಿ ಸಂಕಷ್ಟದಲ್ಲಿರುವ ಕಲಾವಿದರ ಸಹಾಯಾರ್ಥ ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಜೊತೆಗೆ, ಮೈಸೂರು ಮೃಗಾಲಯ ಸಂಕಷ್ಟದಲ್ಲಿ ಸಿಕ್ಕಿಕೊಂಡಿದೆಯೆಂದು ತಿಳಿದು ಸಮುದಾಯದ ಹಲವಾರು ಜನ ದೇಣಿಗೆಗಳನ್ನು ನೀಡಿದ್ದೀರಿ, ಎಲ್ಲರಿಗೂ ನಾವು ಆಭಾರಿಗಳಾಗಿದ್ದೇವೆ. ಈ ನಿಟ್ಟಿನಲ್ಲಿ ನಮ್ಮ ಮಾನವೀಯ ಮೌಲ್ಯಗಳ ಪ್ರತಿಪಾದನೆಗಾಗಿ ಹೀಗೆ ಅನೇಕ ಅವಕಾಶಗಳು ಬಂದಿರುವುದನ್ನು ಸ್ಮರಿಸಬಹುದು. ತಮ್ಮ ಕೈಲಾದ ಸಹಾಯವನ್ನು ಮಾಡುವುದರಲ್ಲಿ ಪಾಲ್ಗೊಂಡ ಎಲ್ಲರಿಗೂ ಅನಂತ ಧನ್ಯವಾದಗಳು.

ಮುಂಬರುವ ಬೇಸಿಗೆ ಕಾಲದಲ್ಲಿನ ಬೆಳವಣಿಗೆಗಳ ಮೇಲೆ ನಾವು ಮುಂದಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ. ಜುಲೈ 13ಕ್ಕೆ ಈ ವರ್ಷದ ಪಿಕ್‌ನಿಕ್ ದಿನಾಂಕವನ್ನು ನಿಗದಿಗೊಳಿಸಿದ್ದೆವು. ಈ ಕಾರ್ಯಕ್ರಮವನ್ನೂ ಕೂಡ ಸೌರಭ ತಂಡದ ಪದಾಧಿಕಾರಿಗಳ ಹಾಗೂ ಹಿರಿಯರ ಸಲಹೆಯ ಮೇರೆಗೆ ರದ್ದುಗೊಳಿಸಿದ್ದೇವೆಂದು ತಿಳಿಸಲು ವಿಶಾದಿಸುತ್ತೇವೆ. ನಾವು ಸ್ಥಳೀಯ ಕಾನೂನನ್ನು ಪಾಲಿಸಿ ಎಲ್ಲರ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಬಹಳ ಮುಖ್ಯವಾದುದು. ಇದೇ ರೀತಿ ಮುಂಬರುವ ಗೌರಿ-ಗಣೇಶ ಹಬ್ಬದ ಕಾರ್ಯಕ್ರಮದ ಬಗ್ಗೆಯೂ ನಮ್ಮ ನಿರ್ಧಾರವನ್ನು ಆದಷ್ಟು ಬೇಗ ತಿಳಿಸುತ್ತೇವೆ. ಅಲ್ಲಿಯವರೆಗೂ ಎಲ್ಲರೂ ತಾಳ್ಮೆಯಿಂದ ಕಾಯಬೇಕಾಗಿ ವಿನಂತಿ. ಮುಂಬರುವ ವಾರದಲ್ಲಿ ನಡೆದುಕೊಂಡು ಬರುವ ಅನೇಕ ಕಾರ್ಯಕ್ರಮಗಳ ಸರಮಾಲೆಯೇ ನಮ್ಮ ಮುಂದಿದೆ, ಅದನ್ನು ಸದ್ಬಳಕೆ ಮಾಡಿಕೊಂಡು ನಾವೆಲ್ಲರೂ ಬೆಳೆಯೋಣ ಎಂಬುದು ನಮ್ಮ ಹಾರೈಕೆ.

ಬೃಂದಾವನದ ಆನ್‌ಲೈನ್ ಕಾರ್ಯಕ್ರಮಗಳು ಹೇಗೆ ಮೂಡಿಬರುತ್ತಿವೆ? ನೀವು ಇನ್ನೇನು ಕಾರ್ಯಕ್ರಮಗಳನ್ನು ನೋಡಲಿಚ್ಚಿಸುತ್ತೀರಿ ಎಂಬುದರ ಬಗ್ಗೆ ದಯವಿಟ್ಟು ತಿಳಿಸಿ.

ಮತ್ತೆ ಸಿಗೋಣ.



ಸತೀಶ್ ಹೊಸನಗರ
ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ

Interfaith Neighbors

Neighbors Helping Neighbors Since 1988

We are raising funds for Meals On Wheels of Monmouth County
We request each family to donate a minimum of $20
Click here to donate --> https://www.paypal.me/kcob

**ನಿಮ್ಮ ಸಹಾಯಕ್ಕೆ ವಂದನೆಗಳು!**

*



# ಕೃತಜ್ಞತಾ ಪೂರ್ವಕ ನುಡಿ ನಮನ

ಸತ್ಯನಾರಾಯಣ

ವಂದನೆ ಅಭಿನಂದನೆ ನಿಮಗೆ
ಇಳೆಯೊಳಗೆ ಕಾಣುವಾ ದೇವದೂತರೆ
ನಿರ್ಮಲಾ ಚಿತ್ತದಿ ಸೇವೆಗೈವ ಯೋಧರೆ
ಎತ್ತೆತ್ತ  ನೋಡಿದತ್ತ ಕಾಣುತಿಹ ಜೀವದಾತರೆ!

ವೈಧ್ಯೋ ನಾರಾಯಣೋ ಹರಿಃ
ಅವರಿವರೆನ್ನದೆ ಅಹರ್ನಿಶಿ ದುಡಿಯುತ
ಜೀವಕ್ಕೆ ಜೀವ ನೀಡಿ  ರಕ್ಷಿಸುತಿಹ
ವೈದ್ಯಕೀಯ ಸಿಬ್ಬಂದಿ ಇಂದೆಮಗೆ ದೇವರು!

ಆರಕ್ಷರಿವರು ತಾನು ತಮ್ಮವರಾ ಮರೆತು
ಬೀದಿ ಬೀದಿಯಲಿ ಬೇಗೆಯಲಿ ನಿಂತು
ಕಂಡರಿವರ ದಿಗಿಲೆನುತ್ತಿದ್ದ ಜನಕೆ ಕೈ ಮುಗಿದು
ಕಡುಕಷ್ಟದಲಿ ಕಾಯ್ವ ಇವರಿಂದೆಮಗೆ ದೇವರು!

ಹಾದಿ ಬೀದಿಯ ಸ್ವಚ್ಛಗೊಳಿಸಿ
ಮನೆ ಮನೆಯ ಕಸ ಸಂಗ್ರಹಿಸಿ
ಬೇಗೆ ಹರಡದಂತೆ ನಿತ್ಯ ರಕ್ಷಿಸುತಿಹ
ಕೆಸರಕಮಲದಂತಿಹ ಸ್ವಚ್ಛತಾ ಸಿಬ್ಬಂದಿ ಇಂದೆಮಗೆ ದೇವರು!

ಸಂಕಷ್ಟದಲಿ ಸಿಲುಕಿರುವ ಜನವ
ತಳಮಳಿಸಿ ಭಯಪಡುವ ಮನವ
ಮನೆಯೊಳಗಿರಿಸಿ ನೆಮ್ಮದಿಯ ನೀಡುತಿಹ
ನಿಮಗೆ ಏನ ನೀಡ ಬಲ್ಲೆವು ನಾವು
ಅನವರತ ನಿಮಗೆ ಆಯುರಾರೋಗ್ಯ ನೀಡೆನುತ ದೇವನಾ
ಮೌನದಲೇ ಬೇಡುವೆವು





# ವಸಂತ ಬರೆದನು ಒಲವಿನ ಓಲೆ

ಕಾವ್ಯಾ ಕಡಮೆ ನಾಗರಕಟ್ಟೆ

ಮೇ ಜೂನ್ ಇದು ತಿಂಗಳುಗಳೆಂದರೆ ಅಮೆರಿಕದ ಪೂರ್ವ ತೀರದಲ್ಲಿರುವ ರಾಜ್ಯಗಳಲ್ಲಿ ಹೊಸ ಉತ್ಸಾಹವೊಂದು ಕಾಣಿಸಿಕೊಳ್ಳುತ್ತದೆ. ಅಧಿಕೃತವಾಗಿ ಚಳಿಗಾಲಕ್ಕೆ ವಿದಾಯ ಹೇಳಿ ವಸಂತನ ಆಗಮನಕ್ಕೆ ಇಡೀ ಪ್ರದೇಶವೇ ಸಜ್ಜುಗೊಳ್ಳುವ ಕಾಲ. ಮುಂದಿನ ಆರೇಳು ತಿಂಗಳುಗಳಾದರೂ ವಾತಾವರಣದ ಉಷ್ಣಾಂಶ ಸಹಿಸಲಸಾಧ್ಯವಾದ ಮಟ್ಟವನ್ನು ತಲುಪುವುದಿಲ್ಲ. ಈ ಕಾರಣಕ್ಕಾಗಿಯೇ ಇಡೀ ಊರು ಚಳಿಗಾಲದ ಅಗತ್ಯಗಳನ್ನೆಲ್ಲ ಮೂಲೆಗೆ ತಳ್ಳಿ ಬೇಸಿಗೆಯ ಕನಸು ಕಾಣಲು ತೊಡಗುತ್ತದೆ. ಅದಕ್ಕೆ ಇಲ್ಲಿನ ಜನ 'ಸ್ಪ್ರಿಂಗ್ ಕ್ಲೀನಿಂಗ್' ಎಂಬ ವಿಶಿಷ್ಟ ಹೆಸರಿನಿಂದ ಕರೆಯುತ್ತಾರೆ. ಅಂದರೆ ವಸಂತನ ಆಗಮನಕ್ಕಾಗಿ ಸಿದ್ಧಗೊಳ್ಳುವುದು ಎಂದರ್ಥ.

ದಪ್ಪ ಜಾಕೆಟ್ಟುಗಳು, ಕೈಗವಸಗಳು, ಥರ್ಮಲ್ಲು ಬಟ್ಟೆಗಳೆಲ್ಲ ಅಟ್ಟ ಸೇರುತ್ತವೆ. ಹಾಗೆಯೇ ಹಿಮ ಬಿದ್ದಾಗ ಬಳಸುವ ಸ್ನೋ ಬ್ಲೋವರ್ಗಳು, ಸ್ನೋ ಬ್ರೂಮ್ಗಳೆಲ್ಲ ಮನೆಯವರ ಬಳಿ ಚೌಕ ಪೆಟ್ಟಿಗೆಗಳಲ್ಲಿ ಪ್ಯಾಕ್ ಮಾಡಿಸಿಕೊಂಡು ನೆಲಮಾಳಿಗೆಯಲ್ಲಿ ವಿಶ್ರಾಂತಿ ಪಡೆಯುತ್ತವೆ. ಚಳಿಗಾಲದಲ್ಲಿ ಪ್ಲಾಸ್ಟಿಕ್ಕಿನ ಕೌದಿ ಹೊದ್ದ ಹಿತ್ತಿಲ ಈಜುಗೊಳಗಳು ಮತ್ತೆ ತೆರೆಯಲ್ಪಡುತ್ತವೆ. ಈ ತನಕ ರಸ್ತೆಗಳಲ್ಲಿ ಸ್ನೋ ಸ್ವಚ್ಛಗೊಳಿಸುವ ಕಾರ್ಯವನ್ನು ಶ್ರದ್ಧೆಯಿಂದ ಪೂರೈಸುತ್ತಿದ್ದ ಟ್ರಕ್ಕುಗಳೆಲ್ಲ ಗ್ಯಾರೇಜು ಸೇರಿ, ಹುಲ್ಲುಗಾವಲನ್ನು ನಿರ್ವಹಿಸುವ, ಈಜುಗೊಳಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸುವ ಸೇವೆಗಳ ಮಾಹಿತಿಯನ್ನು ಮೈಮೇಲೆ ಬರೆಸಿಕೊಂಡ ನವೀನ ವಾಹನಗಳು ಎಲ್ಲೆಂದರಲ್ಲಿ ಕಾಣಸಿಗುತ್ತವೆ. ಚಳಿಗಾಲದಲ್ಲಿ ಹೆಚ್ಚು ಓಡಾಡದೇ ನಾಲ್ಕಾರು ಕೇಜಿ ತೂಕ ಹೆಚ್ಚಿಸಿಕೊಂಡವರೆಲ್ಲ ಬೇಸಿಗೆಯಲ್ಲಿ ಈಜುಡುಗೆ ತೊಡುವ ಉತ್ಸಾಹದಿಂದ ಈಗಿನಿಂದಲೇ ಜಾಗಿಂಗ್ ಶುರುಮಾಡುತ್ತಾರೆ.



ವಸಂತ ಋತು ಶುರುವಾದೊಡನೆ ಬದುಕಿನಲ್ಲಿ ಸೆಟಲ್ ಆದವರ ಪಾಡು ಇದಾದರೆ ಶಾಲಾ ಕಾಲೇಜುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಕಲರವ ಇನ್ನೂ ಸಂಭ್ರಮದಿಂದ ಕೂಡಿದ್ದು, ವಸಂತ ಋತು ಶುರುವಾಗುತ್ತಿದ್ದಂತೆ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸ್ಪ್ರಿಂಗ್ ಬ್ರೇಕ್ ಹೆಸರಿನಲ್ಲಿ ಒಂದು ವಾರದ ರಜೆ ಘೋಷಿಸಲಾಗುತ್ತದೆ. ಆಗ ಮಕ್ಕಳನ್ನು ಕರೆದುಕೊಂಡು ಮನೆಯವರೆಲ್ಲ ಚೆರ್ರಿ ಬ್ಲಾಸಮ್ಗಳನ್ನು ನೋಡಲು ಪ್ರವಾಸ ಹೋಗುತ್ತಾರೆ.

**ಏನಿದು ಚೆರ್ರಿ ಬ್ಲಾಸಮ್?**

ಚಳಿಗಾಲ ಮುಗಿದು ವಾತಾವರಣವೂ ನೆಲವೂ ನಿಧಾನಕ್ಕೆ ಉಷ್ಣತೆಯನ್ನು ಪಡೆದುಕೊಳ್ಳಲು ಶುರುವಿಟ್ಟಾಗ ಮರಗಳೆಲ್ಲ ಮೆಲ್ಲಗೆ ಪುನಃ ಚಿಗುರಲು ತೊಡಗುತ್ತವೆ. ಕೆಲವು ಮರಗಳಲ್ಲಿ ಒಮ್ಮೆಲೇ ಹಸಿರೆಲೆಗಳು ಕಾಣಿಸಿದರೆ ಪ್ರೂನಸ್ ಜಾತಿಗೆ ಸೇರಿದ ಮರಗಳಲ್ಲಿ ಮಾತ್ರ ಮೊದಲು ಗುಲಾಬಿ ಬಣ್ಣದ ಪುಟ್ಟ ಪುಟ್ಟ ಹೂಗಳ ಒತ್ತೊತ್ತಾದ ಚಿಗುರು ಕಾಣಿಸಿಕೊಳ್ಳುತ್ತದೆ. ಇಂಥ ನೂರಾರು ಮರಗಳು ಒಂದೇ ಕಡೆಗಿದ್ದಾಗ ಗುಲಾಬಿ-ಕೆಂಪು- ಹಸಿರು ಮಿಶ್ರಿತ ಬಣ್ಣಗಳನ್ನು ಹೊತ್ತು ನಿಂತ ಮರಗಳನ್ನು ನೋಡುವುದೇ ಕಣ್ಣಿಗೆ ಹರ್ಷ. ಈ ಪುಟ್ಟ ಪುಟ್ಟ ಹೂಗಳಿಗೆ ಚೆರ್ರಿ ಬ್ಲಾಸಮ್ಗಳೆನ್ನುತ್ತಾರೆ. ಇವು ಕೇವಲ ಹದಿನಾಲ್ಕು ದಿನ ಜೀವಂತವಾಗಿರುತ್ತವೆ. ನಂತರ ಗುಲಾಬಿ ಬಣ್ಣದ ಹೂಗಳೆಲ್ಲ ಉದುರಿ ಅದೇ ಜಾಗದಲ್ಲಿ ಗಾಢ ಹಸಿರು ಬಣ್ಣದ ಎಲೆಗಳು ಅವತರಿಸುತ್ತವೆ.

ಈ ಚೆರ್ರಿ ಬ್ಲಾಸಮ್ಗಳನ್ನು ಕಣ್ತುಂಬಿಕೊಳ್ಳಲು ಅಮೆರಿಕದ ರಾಜಧಾನಿ ವಾಷಿಂಗ್ಟನ್ ಡಿ.ಸಿ.ಗೆ ಪ್ರತಿ ವರ್ಷ ದೇಶದ ಎಲ್ಲ ರಾಜ್ಯಗಳಿಂದ ಪ್ರವಾಸಿಗರು ಆಗಮಿಸುತ್ತಾರೆ. ವಾಷಿಂಗ್ಟನ್ ಡಿ.ಸಿ ಅಷ್ಟೇ ಅಲ್ಲದೇ ನ್ಯೂಯಾರ್ಕ್, ಸಿಯಾಟಲ್, ಸ್ಯಾನ್ ಡಿಯಾಗೋ ನಗರಗಳಲ್ಲೂ ಈ ಪ್ರಕೃತಿ ಚೆಲುವನ್ನು ಸವಿಯಬಹುದು.

**ಬೇಸಿಗೆಯಲ್ಲಿ ವಿದ್ಯಾರ್ಥಿಗಳು:**

ಎಲ್ಲ ಮಕ್ಕಳಿಗೂ ಇಲ್ಲಿ ಜೂನ್ ಕೊನೆಯ ವಾರದಿಂದ ಸೆಪ್ಟೆಂಬರ್ ಮೊದಲ ವಾರದ ತನಕ ಬೇಸಿಗೆ ರಜೆ. ಬಹುಸಂಖ್ಯೆಯಲ್ಲಿ ಮಕ್ಕಳು ಬೇಸಿಗೆ ಶಿಬಿರಗಳಿಗೆ ತೆರಳುತ್ತಾರೆ. ಶಾಲೆಯ ಕಟ್ಟುಪಾಡು, ಪರೀಕ್ಷೆಗಳ ಹಂಗಿಲ್ಲದೇ ಪಠ್ಯೇತರ ಕೌಶಲ್ಯಗಳನ್ನು ಪ್ರಕೃತಿಯ ಮಧ್ಯ ಕಲಿಯುತ್ತಾರೆ. ಹೈಸ್ಕೂಲು ಕಲಿಯುತ್ತಿರುವ ಮಕ್ಕಳಂತೂ ಹತ್ತಿರದ ವಿಶ್ವವಿದ್ಯಾಲಯಗಳಲ್ಲಿ, ಪುಟ್ಟ ಕಂಪನಿಗಳಲ್ಲಿ ಇಂಟರ್ನಶಿಪ್ಗಳನ್ನು ಮಾಡಿ ತಮ್ಮ ಕೌಶಲ ವೃದ್ಧಿಸಿಕೊಳ್ಳುತ್ತಾರೆ. ಹದಿನಾಲ್ಕು ವರ್ಷ ದಾಟಿದ ಹೈಸ್ಕೂಲು ವಿದ್ಯಾರ್ಥಿಗಳು ಸಮೀಪದ ಮಾಲ್ಗಳಲ್ಲಿ, ಅಂಗಡಿಗಳಲ್ಲಿ, ರೆಸ್ಟೂರೆಂಟ್ಗಳಲ್ಲಿ ಕೆಲಸ ಮಾಡಿ ಸ್ವಾವಲಂಬನೆಯ ಮೊದಲ ರುಚಿ ಸವಿಯುತ್ತಾರೆ.

ತಮ್ಮ ಶಾಲೆಗಳಿಂದ ಒಪ್ಪಿಗೆ ಪತ್ರಗಳನ್ನು ದೊರಕಿಸಿಕೊಂಡೇ ಇವರು ಈ ಕೆಲಸಗಳನ್ನು ಮಾಡಬೇಕು. ಈ ಸಮ್ಮರ್ ಜಾಬ್ಗಳು ಮಧ್ಯಮವರ್ಗದ ವಿದ್ಯಾರ್ಥಿಗಳಿಗೆ ಪಾಕೆಟ್ಮನಿಯನ್ನು ಒದಗಿಸಿದರೆ ಬಡವಿದ್ಯಾರ್ಥಿಗಳು ಈ ಹಣವನ್ನು ತಮ್ಮ ಮುಂದಿನ ಕಾಲೇಜು ಶಿಕ್ಷಣಕ್ಕೆ ಕೂಡಿಡುತ್ತಾರೆ.

ಕಾಲೇಜು ವಿದ್ಯಾರ್ಥಿಗಳೂ ಸ್ಪ್ರಿಂಗ್ (ವಸಂತ) ಮತ್ತು ಬೇಸಿಗೆ ಕಾಲವನ್ನು ಅಷ್ಟೇ ಆಸ್ಥೆಯಿಂದ ಇದಿರು ನೋಡುತ್ತಾರೆ. ಶೇಖಡಾ ೮೦% ಕಾಲೇಜು ವಿದ್ಯಾರ್ಥಿಗಳು ಕಾಲೇಜಿನ ಹಾಸ್ಟೆಲ್ಲಿನಲ್ಲಿ ಅಥವಾ ಕ್ಯಾಂಪಸ್ಸಿನ ಹೊರಗೆ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತಾರೆ. ಕಾಲೇಜಿನ ಹಾಸ್ಟೆಲ್ಲುಗಳನ್ನು ಇಲ್ಲಿ ಡೋರ್ಮ್ ರೂಮುಗಳು ಎನ್ನುತ್ತಾರೆ. ಹರೆಯದ ಮಕ್ಕಳು ತಂದೆತಾಯಿಯರ ಜೊತೆಗಿರಲು ಇಷ್ಟಪಡುವುದಿಲ್ಲ. ಮನೆಯ ಹತ್ತಿರವೇ ಕಾಲೇಜಿದ್ದರೂ ಬೇರೆಡೆ ಇರಬೇಕೆಂಬ ಒಂದೇ ಕಾರಣಕ್ಕೆ ದೂರದ ವಿಶ್ವವಿದ್ಯಾಲಯಗಳಿಗೆ ಅರ್ಜಿ ರವಾನಿಸುವ ವಿದ್ಯಾರ್ಥಿಗಳೂ ಇದ್ದಾರೆ!

ಪ್ರತೀ ಕಾಲೇಜು ಕ್ಯಾಂಪಸ್ಸಿನಲ್ಲೂ ವಸಂತ ಋತುವಿನ ಆಗಮನವನ್ನು ಸಂಭ್ರಮಿಸಲು ಒಂದಿಲ್ಲೊಂದು ಕಾರ್ಯಕ್ರಮ ಹಮ್ಮಿಕೊಂಡೇ ಇರುತ್ತಾರೆ. ಈ ಸಮಯದಲ್ಲಿ ಹುಡುಗರೂ ಹುಡುಗಿಯರೂ ಸೇರಿ ಪ್ರವಾಸ ಹೋಗುವುದು ಸಾಮಾನ್ಯ. ಯೂನಿವರ್ಸಿಟಿ ಆಫ್ ಪೆನ್ಸಿಲ್ವೇನಿಯಾದಲ್ಲಿ ಪ್ರತಿ ವರ್ಷ ನಡೆಯುವ ಸ್ಪ್ರಿಂಗ್ ಫ್ಲಿಂಗ್ ಉತ್ಸವ ಜನಪ್ರಿಯವಾದದ್ದು. ಈ ಕೂಟಕ್ಕೆ ನಲವತ್ತೈದು ವರ್ಷಗಳ ಇತಿಹಾಸವಿದೆ. ಯುವ ಸಮುದಾಯವೆಲ್ಲ ಒಂದು ಕೈಯಲ್ಲಿ ಬಿಯರ್ ಹಿಡಿದು ಇನ್ನೊಂದು ಕೈಯೆತ್ತಿ ನೃತ್ಯದ ಭಂಗಿ ಅಭಿನಯಿಸುತ್ತ ಸಂಗೀತೋತ್ಸವದಲ್ಲಿ ಮೈಮರೆಯುವುದು ಈ ಉತ್ಸವದ ವಿಶೇಷ. ಈ ಉತ್ಸವ ಬೇಸಿಗೆ ರಜೆ ಶುರುವಾಗುವ ಒಂದು ವಾರದ ಮೊದಲು ನಡೆಯುತ್ತದೆ.

**ರಟ್ಗರ್ಸ್ ಡೇ:**

ನ್ಯೂಜರ್ಸಿಯ ಸ್ಟೇಟ್ ಯೂನಿವರ್ಸಿಟಿಯಾದ ರಟ್ಗರ್ಸ್ ವಿಶ್ವವಿದ್ಯಾಲಯದಲ್ಲಿ ಪ್ರತಿ ವರ್ಷ ನಡೆಯುವ ವಸಂತೋತ್ಸವಕ್ಕೆ ರಟ್ಗರ್ಸ್ ಡೇ ಎಂಬ ಹೆಸರಿದೆ. ಈ ಬಾರಿ ಮೇ ತಿಂಗಳ ಕೊನೆಯ ಶನಿವಾರ ಆಯೋಜಿಸಿದ್ದ ಈ ಹಬ್ಬದಲ್ಲಿ ಸುತ್ತಮುತ್ತಲ ಊರುಗಳಿಂದ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು. ಈ ವಿಶ್ವವಿದ್ಯಾಲಯದ ಕ್ಯಾಂಪಸ್ಸು ನಮ್ಮ ಮನೆಯ ಬಹು ಹತ್ತಿರದಲ್ಲಿದೆ. ಹೀಗಾಗಿ ನನಗೂ ಈ ಹಬ್ಬದಲ್ಲಿ ಭಾಗವಹಿಸಲು ಸಾಧ್ಯವಾಗಿತ್ತು. ಕಂಪ್ಯೂಟರ್ ಸಾಯನ್ಸ್ನಿಂದ ಹಿಡಿದು ಸಮಾಜಶಾಸ್ತ್ರದ ತನಕ, ವೈದ್ಯಕೀಯ ಶಾಸ್ತ್ರದಿಂದ ಹಿಡಿದು ರೋಬೋಟಿಕ್ಸ್ ತನಕ ವಿಶ್ವವಿದ್ಯಾಲಯದ ಎಲ್ಲ ವಿಭಾಗದವರೂ ಜನಸಾಮಾನ್ಯರಿಗೆ ತಿಳಿಯುವಂತೆ ತಮ್ಮ ಅಧ್ಯಯನದ ವಿಷಯಗಳ ಕುರಿತು ಪ್ರದರ್ಶನ ಏರ್ಪಡಿಸಿದ್ದರು. ರಟ್ಗರ್ಸ್ ವಿಶ್ವವಿದ್ಯಾಲಯವು ರಾಜ್ಯ ಯೂನಿವರ್ಸಿಟಿಯಾದುದರಿಂದ ಸಾರ್ವಜನಿಕರಿಗೂ ಈ ಪ್ರದರ್ಶನಗಳಿಗೆ ಪ್ರವೇಶವಿತ್ತು. ಸಾವಿರಾರು ಮಕ್ಕಳು ತಮ್ಮ ಆಸಕ್ತಿಯ ಕ್ಷೇತ್ರಗಳ ಕುರಿತು ಸಾಕಷ್ಟು ಸಂಗತಿಗಳನ್ನು ತಿಳಿದುಕೊಂಡದ್ದು ಅವರ ಕಣ್ಮಿಂಚಿನಲ್ಲೇ ಎದ್ದು ಕಾಣುತ್ತಿತ್ತು.

ಇದೇ ರೀತಿಯ ಹಬ್ಬಗಳು ಬೇಸಿಗೆಯುದ್ದಕ್ಕೂ ಒಂದಿಲ್ಲೊಂದು ಸಂದರ್ಭದಲ್ಲಿ ನಡೆಯುತ್ತಲೇ ಇರುತ್ತವೆ. ಸ್ಥಳೀಯ ಕಲಾವಿದರ ಕಲೆಯನ್ನು ಪ್ರೋತ್ಸಾಹಿಸುವ ಚಿತ್ರ ಸಂತೆ, ಸ್ಥಳೀಯ ರೈತರು ಬೆಳೆದ ತರಕಾರಿಗಳನ್ನು ಮಾರಲು ಅವಕಾಶ ಕಲ್ಪಿಸುವ ರೈತ ಸಂತೆ (ಫಾರ್ಮರ್ಸ್ ಮಾರ್ಕೆಟ್)ಗಳು ಈ ತಿಂಗಳುಗಳಲ್ಲಿ ಮಾಮೂಲಾಗಿ ಎಲ್ಲ ರಾಜ್ಯಗಳಲ್ಲೂ ಕಾಣಸಿಗುತ್ತವೆ.

**ಮನೆಗಳ ಸಂತೆ:**

ಚಳಿಗಾಲ ಮುಗಿಯುತ್ತಿದ್ದಂತೆ ಅಮೆರಿಕದಲ್ಲಿ ಮುನ್ನೆಲೆಗೆ ಬರುವ ಇನ್ನೊಂದು ಉದ್ಯಮವೆಂದರೆ ರಿಯಲ್ ಎಸ್ಟೇಟ್ ಉದ್ಯಮ. ಮನೆ ಕೊಳ್ಳುವವರಿಗೂ ಮಾರುವವರಿಗೂ ಇದು ಸುಗ್ಗಿಕಾಲ. ಒಳ್ಳೆಯ ಮನೆಗಳಿಗೂ ಮತ್ತು ಶಾಲೆಗಳಿಗೂ ಇಲ್ಲಿ ಅವಿನಾಭಾವ ಸಂಬಂಧವಿದೆ. ಆಯಾ ಪ್ರಾಂತ್ಯಗಳ ಶಾಲೆ ನಡೆಯುವುದೇ ಆ ಪ್ರಾಂತ್ಯದಲ್ಲಿ ವಾಸವಾಗಿರುವವರು ಕಟ್ಟುವ ತೆರಿಗೆಯ ಸಹಾಯದಿಂದ. ಹೀಗಾಗಿ ಒಳ್ಳೆಯ ಸ್ಕೂಲ್ ಡಿಸ್ಟ್ರಿಕ್ಟ್ನಲ್ಲಿ ಇರುವ ಮನೆಗಳ ಬೆಲೆಯೂ ಹೆಚ್ಚು. ಸೆಪ್ಟೆಂಬರ್ ಮೊದಲ ವಾರದಲ್ಲಿ ಶಾಲೆಗಳು ಶುರುವಾಗುವುದರಿಂದ ಮೇ ಮತ್ತು ಜೂನ್ ತಿಂಗಳುಗಳಲ್ಲಿ ಮನೆಗಳ ಮಾರಾಟ ಮತ್ತು ಖರೀದಿಗಳು ಭರ್ಜರಿಯಾಗಿ ನಡೆಯುತ್ತದೆ.

ಅಮೆರಿಕದಲ್ಲಿ ಹೊಸತಾಗಿ ಮನೆ ಕಟ್ಟಿಸುವುದಕ್ಕಿಂತ ಕಟ್ಟಿದ ಮನೆಯನ್ನೇ ಖರೀದಿಸುವುದು ರೂಢಿ. ನೂರಾ ಐವತ್ತು ವರ್ಷಗಳ ಹಿಂದೆ ಕಟ್ಟಿಸಿದ ಮನೆಯ ಪಕ್ಕದಲ್ಲೇ ಐದೇ ವರ್ಷದ ಮನೆಯೂ ಮಾರುಕಟ್ಟೆಯಲ್ಲಿ ಲಭ್ಯವಿರುತ್ತದೆ. ನೂರು ವರ್ಷಗಳ ಹಿಂದೆ ಕಟ್ಟಿಸಿದ ಎಂಥದೇ ಮನೆಯಾದರೂ ಒಬ್ಬ ಮಾಲಿಕರಿಂದ ಮತ್ತೊಬ್ಬರಿಗೆ ವರ್ಗವಾಗುತ್ತ ಹೋದ ಹಾಗೆ ಆಯಾ ಕಾಲಕ್ಕೆ ತಕ್ಕಂತೆ ಆಧುನಿಕತೆಯ ಗಾಳಿ ಆ ಮನೆಯಲ್ಲೂ ಸುಳಿದಿರುತ್ತದೆ. ಮನೆಯನ್ನು ಮಾರುಕಟ್ಟೆಗೆ ಸಿದ್ಧಮಾಡುವ ಮೊದಲು ಮಾಲಿಕರು ಆಧುನಿಕ ಪೀಠೋಪಕರಣಗಳನ್ನೋ, ಹೊಸ ನೆಲಹಾಸನ್ನೋ ಹಾಕಿಸಿದ್ದರೆ ಅಂಥ ಮನೆಗಳು ಬೇಗನೆ ಮಾರಾಟವಾಗುತ್ತವೆ.

ವರ್ಷವಿಡೀ ಮನೆಗಳ ಮಾರಾಟ ನಿಧಾನ ಗತಿಯಲ್ಲಿ ನಡೆಯುತ್ತಲೇ ಇದ್ದರೂ ಚಳಿಗಾಲ ಮುಗಿದು ಬೇಸಿಗೆ ಶುರುವಾಗುವ ಈ ಕಾಲ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಸುವರ್ಣಕಾಲವೇ ಸರಿ.

**ಸಮಯವನ್ನೇ ಸರಿಸಿ ಹಿಂದೆ ಮುಂದೆ!**

ಅಮೆರಿಕದ ಹಲವು ರಾಜ್ಯಗಳಲ್ಲಿ ವರ್ಷಕ್ಕೆರಡು ಬಾರಿ ಸಮಯವನ್ನೇ ಹಿಂದೆ ಮುಂದೆ ಮಾಡುತ್ತಾರೆ ಎಂಬ ಸಂಗತಿ ನನಗೆ ಇಲ್ಲಿಗೆ ಬರುವ ಮೊದಲು ತಿಳಿದಿರಲಿಲ್ಲ. ಪ್ರತಿ ವರ್ಷ ಮಾಚರ್್ ತಿಂಗಳ ಎರಡನೆಯ ಭಾನುವಾರ ರಾತ್ರಿ ಎರಡು ಘಂಟೆಗೆ ಎಲ್ಲ ಇಲೆಕ್ಟ್ರಾನಿಕ್ ಗಡಿಯಾರಗಳೂ ಒಂದು ಘಂಟೆ ಮುಂದೆ ಸರಿಯುತ್ತವೆ. ಅಂದರೆ ರಾತ್ರಿ ಎರಡು ಘಂಟೆ ಎಂದು ತೋರಿಸಬೇಕಾದಲ್ಲಿ ಮೂರು ಘಂಟೆ ಎಂದು ತೋರಿಸುತ್ತದೆ.

ಇದಕ್ಕೆ ಡೇ ಲೈಟ್ ಸೇವಿಂಗ್ ಟೈಮ್ ಎಂದು ಕರೆಯುತ್ತಾರೆ. ಅಂದರೆ ಹಗಲನ್ನು ಉಳಿಸುವ ಸಮಯ ಎಂದರ್ಥ. ಈ ಸಮಯದಲ್ಲಿ ಗಡಿಯಾರಗಳನ್ನು

ಒಂದು ಘಂಟೆ ಮುಂದೆ ಸರಿಸುವುದರಿಂದ ಆಗುವ ಮುಖ್ಯ ಪ್ರಯೋಜನವೆಂದರೆ ವಿದ್ಯುಚ್ಛಕ್ತಿಯ ಉಳಿತಾಯ. ದಿನಗಳು ದೀರ್ಘವಾಗಿರುವುದರಿಂದ ರಾತ್ರಿ ಒಂಬತ್ತು ಘಂಟೆಯಾದರೂ ಕತ್ತಲಾಗಿರುವುದಿಲ್ಲ. ಹೀಗಾದಾಗ ಬೇಸಿಗೆಯಲ್ಲಿ ಜನ ಹೊರಗೆ ಕಳೆಯುವ ಸಮಯ ಅಧಿಕವಾಗುತ್ತದೆ. ಆಗ ಅದು ಅವರ ದೇಹಕ್ಕೂ, ಮನಸ್ಸಿಗೂ ಮುದ ನೀಡಿ ಸರ್ವತೋಮುಖ ಆರೋಗ್ಯ ವೃದ್ಧಿಗೆ ಕಾರಣವಾಗುತ್ತದೆ. ಹೆಚ್ಚು ಹೊತ್ತು ಬೆಳಕಿರುವುದರಿಂದ ರಸ್ತೆ ಅಪಘಾತಗಳೂ, ಕಳ್ಳತನಗಳೂ ಕಡಿಮೆಯಾಗುತ್ತವೆ ಎಂಬುದು ಡೇ ಲೈಟ್ ಸೇವಿಂಗ್ ಪ್ರತಿಪಾದಕರ ಅಂಬೋಣ.
ಅದೇ ರೀತಿ ಪ್ರತಿ ವರ್ಷ ನವಂಬರ್ ತಿಂಗಳ ಮೊದಲ ಭಾನುವಾರದಂದು ಈ ದಿನವನ್ನು ಉಳಿಸುವ ಕಾರ್ಯ ಅಂತ್ಯವಾಗುತ್ತದೆ. ಅಂದರೆ ಆ ಮಧ್ಯರಾತ್ರಿ ಎರಡು ಘಂಟೆಗೆ ಗಡಿಯಾರಗಳೆಲ್ಲ ಒಂದು ಘಂಟೆ ಹಿಂದೆ ಸರಿಯುತ್ತವೆ. ತಮಾಷೆಯ ವಿಷಯವೆಂದರೆ ನಾವು ಕೈಯಲ್ಲಿ ಸಮಯ ಬದಲಿಸಬೇಕಾದ ಅಲಾರಾಂ ಕ್ಲಾಕುಗಳು, ಗೋಡೆ ಗಡಿಯಾರಗಳು ಎಲ್ಲ ಈ ಸಂದರ್ಭದಲ್ಲಿ ವರ್ಷಕ್ಕೆರಡು ಬಾರಿ ತಪ್ಪು ಸಮಯ ತೋರಿಸುತ್ತಲೇ ಇರುತ್ತವೆ. ಇಲೆಕ್ಟ್ರಾನಿಕ್ ಗಡಿಯಾರಗಳು ಮಾತ್ರ ಇದಕ್ಕೆ ವ್ಯತಿರಿಕ್ತವಾಗಿ ತಾವೇ ಸಮಯ ಬದಲಾಯಿಸಿಕೊಳ್ಳುತ್ತವೆ.
ನವಂಬರ್ನಲ್ಲಿ ಸಮಯ ಬದಲಾದಾಗ ಒಂದು ಘಂಟೆ ಹೆಚ್ಚು ನಿದ್ದೆ ಮಾಡಬಹುದಾಗಿದ್ದರಿಂದ ಡೇ ಲೈಟ್ ಸೇವಿಂಗ್ ಅನ್ನು ಇಷ್ಟಪಡುವವರೆಲ್ಲ ಮಾರ್ಚ್‌ನಲ್ಲಿ ಒಂದು ಘಂಟೆ ಮೊದಲು ಏಳಬೇಕಾದಾಗ ಈ ವ್ಯವಸ್ಥೆಯನ್ನು ಬೈದುಕೊಳ್ಳುತ್ತ ಆಫೀಸುಗಳಿಗೆ ಕಣ್ಣುಜ್ಜುತ್ತ ತಡವಾಗಿ ತಲುಪಿ ಫಜೀತಿ ಅನುಭವಿಸುತ್ತಾರೆ!

***

ದೇಶದ ಗಾರ್ಡನ್ ಸ್ಟೇಟ್ ಅಂದರೆ ಉದ್ಯಾನಗಳ ರಾಜ್ಯವೆಂದೇ ಹೆಸರುವಾಸಿಯಾದ ನ್ಯೂಜೆರ್ಸಿಯಲ್ಲಿ ನಾನು ಮೊದಲ ಬಾರಿ ಕಾಲಿಟ್ಟಾಗ ಸೆಪ್ಟೆಂಬರ್ ತಿಂಗಳು ನಡೆಯುತ್ತಿತ್ತು. ಆಗಷ್ಟೇ ಬೇಸಿಗೆ ಮುಗಿದು ಫಾಲ್ ಅಂದರೆ ಶಿಶಿರದ ಆಗಮನವಾಗಿತ್ತು. ಬೇಸಿಗೆಯಲ್ಲಿ ಹಸಿರಿನ ಹೊದಿಕೆ ಹೊದ್ದು ಮೈತುಂಬಿ ನಿಂತ ಮರಗಳು ಒಂದೊಂದೇ ಎಲೆಗಳನ್ನು ಕಂದು ಬಣ್ಣಕ್ಕೆ ತಿರುಗಿಸುತ್ತಿದ್ದವು. ಮುಂದಿನ ಕೆಲವೇ ದಿನಗಳಲ್ಲಿ ಆ ಕಂದು ಎಲೆಗಳನ್ನು ಕೊಡವಿಕೊಂಡು ಮರದ ರೆಂಬೆ ಕೊಂಬೆಗಳು ಬೋಳಾಗಿ ಕಾಣತೊಡಗಿದ್ದವು. ಮರಗಳಲ್ಲಿ ಜೀವಂತಿಕೆಯ ಸಂಕೇತದಂತಿದ್ದ ಹಸಿರು ಮತ್ತು ಕಂದು ಬಣ್ಣಗಳು ಇನ್ನೇನು ಚಳಿಗಾಲ ಶುರುವಾಗಬೇಕು ಎನ್ನುವಾಗಲೇ ಬೂದು ಬಣ್ಣಕ್ಕೆ ತಿರುಗಿ ಸಾಲಾಗಿ ಮರುಗಟ್ಟಿ ನಿಂತಂತೆ ಕಾಣಹತ್ತಿದ್ದವು. ಎಲೆಗಳಿಲ್ಲದ ಕೊಂಬೆಗಳು ಗಾಳಿಯಲ್ಲಿ ಬರಿಗೈ ಚಾಚಿ ಒಂಚೂರು ಉಷ್ಣತೆಗಾಗಿ ಅಂಗಲಾಚುತ್ತಿದ್ದಂತೆ ಭಾಸವಾಗುತ್ತಿತ್ತು.
ಆಗಲೇ ಆರು ವರ್ಷ ಅಮೆರಿಕದಲ್ಲಿ ಸಮಯ ಕಳೆದಿದ್ದ ನನ್ನ ಗಂಡನಿಗೆ ಎಲ್ಲ ಮರಗಿಡಗಳೂ ಒಣಗಿ ಹೋದವಲ್ಲ, ಮತ್ತೆ ಚಿಗುರಲು ಸಾಧ್ಯವೇ ಇಲ್ಲ ಎನ್ನುವ ರೀತಿ ಬೂದು ಬಣ್ಣಕ್ಕೆ ತಿರುಗಿಬಿಟ್ಟಿದ್ದಾವಲ್ಲ ಅಂತ ಆತಂಕದಿಂದ ಕೇಳಿದ್ದೆ. ಅವನು ಇನ್ನೂ ನಾಲ್ಕೇ ತಿಂಗಳು ಕಾಯ್ದು ನೋಡು ಅಂತ ಮುಗುಳು ನಕ್ಕಿದ್ದ. ಹುಬ್ಬಳ್ಳಿಯಲ್ಲಿದ್ದಾಗ ಹವಾಗುಣದ ಈ ದಿಢೀರ್ ಏರುಪೇರು ಅನುಭವಕ್ಕೆ ಬರುತ್ತಿರಲಿಲ್ಲ. ಏಕೆಂದರೆ ದಕ್ಷಿಣ ಭಾರತದಲ್ಲಿ ನಮ್ಮ ಅನುಭವಕ್ಕೆ ದೊರಕುವುದು ಟ್ರಾಪಿಕಲ್ ಅಂದರೆ ಉಷ್ಣವಲಯದ ಹವಾಗುಣ. ಈ ಬಗೆಯ ಹವಾಗುಣದ ವಿಶೇಷತೆಯೆಂದರೆ ವರ್ಷದ ಎಲ್ಲಾ ತಿಂಗಳುಗಳಲ್ಲೂ ಈ ಪ್ರದೇಶದ ಹವಾಮಾನ ನಿಯಂತ್ರಣದಲ್ಲಿರುತ್ತದೆ.
ಈಗ ನಾನಿರುವ ಸ್ಥಳದಲ್ಲಿ ಅನುಭವಕ್ಕೆ ಬರುವುದು ಟೆಂಪರೇಟ್ ಅಂದರೆ ಸಮಶೀತೋಷ್ಣ ಹವಾಗುಣ. ಇದು ದಕ್ಷಿಣ ಭಾರತದ ಟ್ರಾಪಿಕಲ್ ಹವಾಮಾನಕ್ಕಿಂತ ಬೇರೆಯಾದುದು. ಟೆಂಪರೇಟ್ ಹವಾಗುಣದಲ್ಲಿ ಋತುವಿನಿಂದ ಋತುವಿಗೆ ನಿಸರ್ಗದ ಬದಲಾವಣೆಗಳು ಢಾಳಾಗಿ ಕಾಣಿಸುತ್ತವೆ. ಇಲ್ಲಿ ಶಿಶಿರದಲ್ಲಿ ಒಂದು ಎಲೆಯೂ ಬಿಡದೇ ಉದುರುವುದು, ವಸಂತದಲ್ಲಿ ಹೊಚ್ಚ ಹೊಸ ಹಸಿರು ಅರಳುವುದು ಎಲ್ಲ ಟೆಂಪರೇಟ್ ಹವಾಗುಣದ ಪ್ರಭಾವದಿಂದಲೇ.
ಅದೆಷ್ಟನೆಯ ಬಾರಿಯೋ ಬೇಸಿಗೆಯನ್ನು ಕೊಂಡಾಡಿದ ಮೇಲೆ ಒಂದು ಮಟಮಟ ಮಧ್ಯಾಹ್ನ ಸೆಖೆ ತಾಳಲಾರದಾದಾಗ ಏಸಿಯಲ್ಲೂ ಬೆವರುತ್ತ ಮೊದಲ ಸ್ನೋ ಯಾವತ್ತಾದರೂ ಬೀಳುತ್ತದಲ್ಲ ದೇವರೇ ಅಂತ ನಿಟ್ಟುಸುರು ಬಿಡುವಂತಾಗುವುದು ಸುಳ್ಳಲ್ಲ!

###





# "ಮೆಮೋರಿಯಲ್ ಡೇ" ಎಂಬ ಮಹತ್ವಪೂರ್ಣ ಆಚರಣೆ

*ಶ್ರೀವಿದ್ಯಾ ಪ್ರಶಾಂತ್*

ಉತ್ತರ ಅಮೇರಿಕಾದಲ್ಲಿ ಮೆಮೋರಿಯಲ್ ಡೇ- "ಹುತಾತ್ಮರ ದಿನ" ಒಂದು ಮಹತ್ವಪೂರ್ಣ ದಿನವಾಗಿ ಆಚರಿಸಲ್ಪಡುತ್ತದೆ. ಈ ದೇಶದ ಏಳಿಗೆಗಾಗಿ-ರಕ್ಷಣೆಗಾಗಿ ಶ್ರಮಿಸಿ ಪ್ರಾಣತ್ಯಾಗಗೈದಂತಹ ಎಲ್ಲಾ ಪುರುಷ ಹಾಗೂ ಮಹಿಳಾ ಯೋಧರನ್ನು ಸ್ಮರಿಸಿ ಶ್ರದ್ಧಾಂಜಲಿಯನ್ನು ಸಲ್ಲಿಸುವಂತಹ ದಿನ ಇದಾಗಿದೆ. ಪ್ರತಿ ವರ್ಷ ಮೇ ತಿಂಗಳ ಕೊನೇಯ ವಾರದ ಸೋಮವಾರದಂದು ಈ ದಿನವನ್ನು ಆಚರಿಸಲಾಗುತ್ತದೆ.

ಇತಿಹಾಸ ಮತ್ತು ಮಹತ್ವ:ಎರಡನೇ ಮಹಾಯುದ್ಧದ ಬಳಿಕ ಮೇ ೫ ೧೮೬೮ರಲ್ಲಿ ಗ್ರಾಂಡ್ ಆರ್ಮ್ ರಿಪಬ್ಲಿಕ್ ನ ಮುಖ್ಯಸ್ಥ ಜನರಲ್ ಜಾನ್. ಎ.ಲೊಗನ್ ಮೊದಲ ಬಾರಿಗೆ ಈ ದಿನವನ್ನು ಡೆಕೊರೇಶನ್ ಡೇ/ ಅಲಂಕಾರಿಕ ದಿನವೆಂದು ಪರಿಗಣಿಸಿ ಯುದ್ಧದಲ್ಲಿ ವೀರಮರಣವನ್ನು ಹೊಂದಿದಂತಹ ಎಲ್ಲಾ ವೀರ ಯೋಧರ ಸಮಾಧಿಯನ್ನು ಹೂವಿನಿಂದ ಅಲಂಕರಿಸಿ- ದೇಶದ ಬಾವುಟವನ್ನೂ ಇಟ್ಟು ಅವರ ತ್ಯಾಗ ಮತ್ತು ಬಲಿದಾನವನ್ನು ನೆನಪಿಸಿಕೊಳ್ಳುವಂತಹ ಆಚರಣೆಯನ್ನು ಜಾರಿಗೆ ತಂದರು.

೧೯೭೧ ರಲ್ಲಿ ಈ ದಿನವನ್ನು ಮೆಮೋರಿಯಲ್ ಡೇ/ ಹುತಾತ್ಮರ ದಿನ ಎಂದು ಮರುನಾಮಕರಣ ಮಾಡಲಾಯಿತು. ಈ ದಿನ ದೇಶದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಇತರ ಮಂತ್ರಿ ಮಂಡಲದ ಸದಸ್ಯರೆಲ್ಲರೂ ದೇಶದ ಒಳಿತಿಗಾಗಿ ಪ್ರಾಣತ್ಯಾಗ ಮಾಡಿದ ಯೋಧರೆಲ್ಲರ ಸಮಾಧಿ ಬಳಿ ಗೌರವ ಪೂರ್ವಕವಾಗಿ ದೇಶದ ಬಾವುಟವನ್ನಿಟ್ಟು, ಹೂವಿನಿಂದ ಅಲಂಕರಿಸಿ ಅವರ ದೇಶಸೇವೆಯನ್ನು ನೆನಪಿಸಿಕೊಳ್ಳುವಂತಹ ಕಾರ್ಯವನ್ನು ಮಾಡುತ್ತಾರೆ. ಇತ್ತೀಚಿನ ವರುಷಗಳಲ್ಲಿ ನಿರ್ದಿಷ್ಟ ಸಮಯವನ್ನೂ ನಿಗದಿಪಡಿಸಲಾಗಿದೆ. ಆ ಪ್ರಕಾರವಾಗಿ ಅಪರಾಹ್ನ ೩.೦೦ಗಂಟೆಯ ಸುಮಾರಿಗೆ, ದೇಶದ ಪ್ರಜೆಗಳೆಲ್ಲರೂ ಒಂದು ನಿಮಿಷದ ಮೌನಾಚರಣೆಯನ್ನು ಮಾಡಿ ಅಗಲಿದ ದಿವ್ಯ ಚೇತನಗಳನ್ನು ನೆನಪಿಸಿಕೊಂಡು ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾರೆ.

ಈ ಆಚರಣೆಯು ಮೊದಲಿಗೆ ನ್ಯೂಯಾರ್ಕ್ ನಗರದ ವಾಟರ್ಲೂ ಎಂಬಲ್ಲಿ ಪ್ರಾರಂಭಗೊಂಡಿತು. ಈ ದಿನವನ್ನು ಗ್ರೀಷ್ಮ ಋತುವಿನ ಆಗಮನಕ್ಕೆ ನಾಂದಿ ಹಾಡುವ ದಿನವೆಂದೂ ಗುರುತಿಸಲಾಗುತ್ತದೆ.

ಈ ವರುಷ ಸ್ಕೌಟ್ ಸೇವಾಸಂಘದ ವತಿಯಿಂದ ನನ್ನ ಮಗ ಸಾರ್ಥಕ್ ರಾವ್ ಹುತಾತ್ಮರ ದಿನದಂದು ಫುಡ್ ಡ್ರೈವ್ ಎಂಬ ಸೇವಾ ಕಾರ್ಯವನ್ನು ಮಾಡಿ ಬಳಿಕ ಹುತಾತ್ಮರ ದೇಶ ಸೇವೆಯನ್ನು ನೆನೆದು ಅಮೇರಿಕಾದ ರಾಷ್ಟ್ರಗೀತೆಯನ್ನು ಹಾಡಿ ಗೌರವ ಸಲ್ಲಿಸಿದನು. ಇಂದಿನ ಯುವ ಪೀಳಿಗೆಯ ಮನದಲ್ಲಿ ದೇಶಪ್ರೇಮ, ತ್ಯಾಗ, ಸಹಕಾರ ಮುಂತಾದ ಉತ್ತಮ ಮನೋಭಾವನೆಗಳನ್ನು ಬೆಳೆಸುವಲ್ಲಿ ಸ್ಕೌಟ್ ಸಂಘವು ತುಂಬಾ ಸಹಕಾರಿಯಾಗಿದೆ.







# ಮರೆಯಲಾಗದ ಬಾಲ್ಯದ ನೆನಪು

*ಪ್ರಶಾಂತ್ ಮುರುಗೇಂದ್ರಪ್ಪ*

ಹೊಸ ತಂತ್ರಜ್ಞಾನದಿಂದ ನಮ್ಮ ನೆನಪಿನ ಶಕ್ತಿ ಕಳೆದುಕೊಳ್ಳುತ್ತಿದ್ದೇವೆ. ನಮ್ಮ ಕಳೆದ ವರ್ಷದ ಟ್ರಿಪ್ ನೆನಪಿಗೆ ಬರೋದು ಫೇಸ್‌ಬುಕ್ ನೆನಪಿಸಿದಾಗ. ಸ್ನೇಹಿತರ/ಬಂಧುಗಳ ಹುಟ್ಟಿದ ಹಬ್ಬ, ಮದುವೆ ವಾರ್ಷಿಕೋತ್ಸವ ಎಲ್ಲಾ ನೆನಪಿಗೆ ಬರೋದು ಫೇಸ್‌ಬುಕ್ ನೆನಪಿಸಿದಾಗಲೆ. ಆದರೆ ಒಂದು ವಿಪರ್ಯಾಸ ಏನೇಂದರೆ, ನಮಗೆಲ್ಲಾ ನಮ್ಮ ಬಾಲ್ಯದ ನೆನಪುಗಳು ಹಚ್ಚ ಹಸಿರಾಗಿ ಮಸ್ತಿಷ್ಕದಲ್ಲಿ ಶಾಶ್ವತವಾಗಿ ಇದ್ದು, ಆಗಾಗ ನೆನಪಿಗೆ ಬಂದು, ನಮ್ಮನ್ನು ಬೇರೆಯೇ ಲೋಕಕ್ಕೆ ಕರೆದ್ಯೊಯ್ದು ಮನಸ್ಸಿಗೆ ಒಂದು ಸುಮಧುರ ಅನುಭವ ಕೊಡುತ್ತವೆ.

ಈ ಕೋವಿಡ್ ಸಮಯದಲ್ಲಿ ಕಳೆದ ವಾರ ನನ್ನ ಮೊದಲ ಬೆಂಗಳೂರು ಟ್ರಿಪ್ ನೆನಪಿಗೆ ಬಂದು ನನ್ನನ್ನು ಮುವತ್ತೈದು ವರ್ಷ ಹಿಂದಕ್ಕೆ ಕರೆದುಕೊಂಡು ಹೋಯಿತು.ಆಗ (೧೯೮೫) ನಾನು, ಹಿರೇಕೇರೂರು ತಾಲೂಕು ಮಾಸೂರಿನಲ್ಲಿ ೫ ನೆಯ ಇಯತ್ತೆಯಲ್ಲಿ ಓದುತ್ತಿದ್ದೆ. ಬೇಸಿಗೆ ರಜದಲ್ಲಿ, ಬೆಂಗಳೂರಿಗೆ ಹೋಗುವುದೆಂದು ನಿಶ್ಚಯವಾಗಿ ನಮ್ಮ (ತಂದೆ, ತಾಯಿ, ನಾನು ಮತ್ತು ನನ್ನ ಇಬ್ಬರು ತಮ್ಮಂದಿರು) ಪ್ರಯಾಣ ಶುರುವಾಯಿತು. ಆಗ ಮಾಸುರಿನಿಂದ ಬೆಂಗಳೂರಿಗೆ ಕೆಂಪು ಬಸ್ಸು (ಹಿರೇಕೇರೂರು-ಬೆಂಗಳೂರು) ಸಂಜೆ ಸುಮಾರು ೬:೩೦ಕ್ಕೆ ಶುರು ಮಾಡಿ, ಬೆಂಗಳೂರಿಗೆ ನಸುಕಿನ ಜಾವ ಮುಟ್ಟುತ್ತಿತ್ತು. ನನಗೆ ಇನ್ನೂ ನೆನಪಿದೆ, ಮೆಜೆಸ್ಟಿಕ್‌ನಿಂದ ಆಟೋದಲ್ಲಿ ಆನಂದರಾವ್  ವೃತ್ತದಲ್ಲಿರುವ ರಾಜಭವನ ಹೋಟೆಲಿಗೆ ಹೋಗಿ, ಅಲ್ಲಿ ವಾಸ್ತವ್ಯ ಮಾಡಿದ್ದು. ನನ್ನ ಸೋದರಮಾವ ಆಗ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು, ಯಜ್ಡಿ ಮೋಟರ್ ಬೈಕ್ (ನಂ: ಸಿಎಟಿ-೧೨೦೧) ಇಟ್ಟುಕೊಂಡಿದ್ರು. ಅವರು ಒಂದು ದಿವಸ, ನಮ್ಮ ಮೂವರಿಗೂ (ನಾನು ಮತ್ತು ನನ್ನ ತಮ್ಮಂದಿರಬ್ಬರು) ಏರ್ಪೋರ್ಟ್ ತೋರಿಸಿದರು. ಮರಳಿ ಬರುವಾಗ ಎಂ.ಜಿ ರಸ್ತೆಯಲ್ಲಿ ಪೋಲಿಸ್ ಮಾಮ ತಡೆದು, ನಾಲ್ಕು ಜನ ಹೋಗ್ತಿರೊದಕ್ಕೆ ವಾರ್ನಿಂಗ್ ಕೊಟ್ಟಿದ್ದು ನೆನಪಿದೆ. ಮುಂದೆ ಕಾರ್ಪೋರೇಶನ್ ವೃತ್ತದಲ್ಲಿ ನನ್ನ ಕೊನೆಯ ತಮ್ಮ ಒಂದು ಕಾಲಿನ ಚಪ್ಪಲಿಯನ್ನು ಬೀಳಿಸಿಕೊಂಡು ಬಿಟ್ಟ, ಆಗ ಟ್ರಾಫಿಕ್ ಇಷ್ಟು ಇರಲಿಲ್ಲವಾದ್ದರಿಂದ, ನನ್ನ ಸೋದರಮಾವ ಬೈಕನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿದ್ರು. ನಾನು ಇಳಿದು ಹೋಗಿ ಚಪ್ಪಲಿ ಎತ್ತಿಕೊಂಡು ಬಂದೆ.

ಈ ನೆನಪನ್ನು ಬರಹ ರೂಪಕ್ಕೆ ತರುತ್ತಿರುವಾಗ, ನನ್ನ ಕೊನೇಯ ಮಗಳು ಏನು ಬರೀತಿದಿಯ ಅಂತ ಕೇಳಿದಳು. ನಾನು ನನ್ನ ಹಳೇಯ ನೆನಪಿನ ಕಥೆ ಹೇಳಿದೆ, ಅದಕ್ಕವಳು "ರಿಯಲೀ" ಅಂತ ಅಮೇರಿಕದವರ ದೃಷ್ಟಿಯಲ್ಲಿ ನನ್ನನ್ನು ನೋಡಿದಳು. ನಾನು ಮನಸ್ಸಿನಲ್ಲಿ ಅನ್ಕೊಂಡೆ, ರಿಯಲಿ ನಿನಗೇನು ಗೊತ್ತು ನಾವು ಬಾಲ್ಯದಲ್ಲಿ ಪಡೆದ ಸುಮಧುರ ಅನುಭವದ ಮಜಾ ಅಂತ!!

ಇದಕ್ಕೆ ನೀವೆನಂತೀರ!!?








# ಗುರು ನಮನ

ಬ ರಾ ಸುರೇಂದ್ರ



ಇಂದು ಮುಂಜಾನೆ ಹೃದಯ ತುಂಬಾ ಭಾರವಾಯಿತು

ನಿತ್ಯೋತ್ಸವ ಕವಿ ನಿಸಾರ್ ಅಹಮದ್ ಅಮರರಾಗಿ ಶೂನ್ಯತೆಯ ಅರಿವಾಯಿತು

ನಾಲ್ಕು ದಶಕಗಳ ಹಿಂದೆ ಸಹ್ಯಾದ್ರಿ ಕಾಲೇಜಿನಲ್ಲಿ ವಿದ್ಯಾರ್ಥಿ ನಾನು

ನಿಸಾರ್ ಅಹಮದ್ ಅವರು ನೇರವಾಗಿ ಪ್ರೊಫೆಸರ್ ಆಗದಿದ್ದರೇನು

ನನ್ನೆಲ್ಲಾ ಕನ್ನಡದ ಸಹಿತ್ಯಾತ್ಮಕ ಚಟುವಟಿಕೆಗಳಲ್ಲಿ ಗುರುಗಳಾಗಿದ್ದರವರು

ಅನೇಕಾನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಲ್ಲಿ ಬೆನ್ನೆಲುಬಾಗಿದ್ದವರು

ಗೋಕಾಕ್ ವರದಿಯ ಹೋರಾಟದಲ್ಲಿ ಸಂಪೂರ್ಣ ಸಹಕಾರದಿಂದ ಬೆನ್ನು ತಟ್ಟಿದವರು

ಗಾಂಧಿಬಜಾರಿನಲ್ಲಿ ನಾನು ಮೈಸೂರು ಬ್ಯಾಂಕ್ ಉದ್ಯೋಗಿಯಾಗಿದ್ದ ಸಮಯದಲ್ಲಿ

ಅವರ "ಗಾಂಧಿಬಜಾರಿನಲ್ಲಿ ಮಳೆ" ಕವನ ನನ್ನ ಕವನದೊಂದಿಗೆ ಅದೇ ಬ್ಯಾಂಕಿನಲ್ಲಿ

ಎಲ್ಲರೆದುರು ಓದಿ ಸಹೋದ್ಯೋಗಿಗಳ ಹುಬ್ಬೇರಿಸಿ ನನ್ನ ತನು ಮನ ಸೂರೆಗೊಂಡರಲ್ಲಿ

ಅಮೆರಿಕದಲ್ಲಿ ಸನ್ಮಾನಿಸಿದಾಗ ನನ್ನ ಅವರ ಕಥೆಗಳನ್ನು ಎಲ್ಲರೆದುರು ಹೇಳಿದವರು

ಅನೇಕಬಾರಿ ಅವರ ಸ್ವಹಸ್ತದಿಂದ ನನ್ನ ಶ್ಲಾಘಿಸಿ ಅಭಿನಂದನೆ ಸಲ್ಲಿಸಿದವರು

ಕನ್ನಡ ಸಾಹಿತ್ಯಕ್ಕೆ ಸಹ್ಯಾದ್ರಿ ಬೆಟ್ಟದೆತ್ತರ ಅಮೂಲ್ಯ ಕೊಡುಗೆ ನೀಡಿದವರು

ಇಂದು ನೀವು ನಮ್ಮನ್ನಗಲಿ ದೂರ ಬಹು ದೂರ ಸಾಗುತ್ತಿದ್ದೀರಿ

ನಿಮ್ಮ ನೆನಪನ್ನು ಮಾತ್ರ ನಮಗೆ ಚಿರವಾಗಿ ಬಿಟ್ಟು ಬಿಟ್ಟಿರಿ

ನೀವು ಹೋಗುವ ಆ ಪುಣ್ಯ ಸ್ಥಳದಲ್ಲೂ ಕನ್ನಡದ ಕಂಪನ್ನು ಹೊರಹೊಮ್ಮುವಿರಿ

ನೀವೆಲ್ಲಿದ್ದರೂ ನಮ್ಮನ್ನು ಕನ್ನಡನಾಡನ್ನು ಹೃದಯ ತುಂಬಿ ಹರಸುತ್ತಿರಿ



# ಹನುಮ ಮತ್ತು ಕೊರೋನಾ

ನರಸಿಂಹ ಮೂರ್ತಿ

ಇತ್ತೀಚೆಗೆ ಇಹ ಲೋಕ ತ್ಯಜಿಸಿದ 'ಕವಿ ನಿಸಾರ್ ಅಹ್ಮದ್ ' ರ "ರಾಮನ್ ಸತ್ತ ಸುದ್ದಿ" ಅವರ ಪ್ರಸಿದ್ಧ ಕವನಗಳಲ್ಲಿ ಒಂದು. ಸರ್. ಸಿ. ವಿ ರಾಮನ್ ನಿಧನ ಹೊಂದಿದ ವಾರ್ತೆಯನ್ನು ಪತ್ರಿಕೆಯಲ್ಲಿ ಓದಿ, ಕಸಿವಿಸಿಗೊಂಡು, ನವೆಂಬರ್ ತಿಂಗಳ ಚುಮು ಚುಮು ನಸುಕಿನಲ್ಲಿ ವಾಕಿಂಗ್ ಹೊರಟ ನಿಸಾರ್ ನಡೆಯುತ್ತಾ ತಲುಪುವುದು ಶಿವಮೊಗ್ಗದ ಹೊರವಲಯದಲ್ಲಿದ್ದ ನವುಲೆ ಗ್ರಾಮವನ್ನು. ಬದುಕಿನ ಕೆಲವು ಮುಖ್ಯ ವರ್ಷಗಳನ್ನು ನವುಲೆ ಗ್ರಾಮದಲ್ಲಿಯೇ ಕಳೆದ ನನಗೆ, ನಿಸಾರ್ ಅವರ ಪ್ರಸಿದ್ಧ ಕವನವೊಂದಕ್ಕೆ ಈ ಸ್ಥಳ ಪ್ರೇರಣೆಯಾಗಿರಬಹುದು ಎಂದು ಇತ್ತೀಚಿನವರೆಗೆ ಈ ಕವನ ಓದುವ ತನಕ ತಿಳಿದಿರಲಿಲ್ಲ.

ರಾಮನ್ ಸಾವಿನ ಬಗ್ಗೆ ಯಾರೂ ದುಃಖಿಸುತ್ತಿಲ್ಲ ಎಂದು ನವುಲೆ ತಲುಪಿದಾಗ ನಿಸಾರ್ ಗೆ ಎದಿರಾಗುವುದು ಗ್ರಾಮದ ಹನುಮ ಎಂಬ ವ್ಯಕ್ತಿ. ಜಾತಿಗೊಂದು ಕೇರಿ, ಕೇರಿಗೊಬ್ಬ ಹನುಮ, ಬಸವ ಇರಬಹುದಾದ ಗ್ರಾಮದಲ್ಲಿ ಯಾವ ಹನುಮ ಇವರಿಗೆ ಸಿಕ್ಕನೋ ತಿಳಿಯದು. ತನ್ನ ಧಣಿಯ ಗದ್ದೆಯಲ್ಲಿ ಪಾತಿ ಮಾಡುತ್ತಿದ್ದ ಹನುಮ, ನಿಸಾರ್ ಅವರನ್ನು ಕಂಡೊಡನೆ "ಹ್ಯಾಂಗದೀರಿ?" ಎಂದು ಕೇಳುತ್ತಾ, ಅವರ ಯೋಗ ಕ್ಷೇಮ ವಿಚಾರಿಸುತ್ತಾನೆ. ಬೇರೆ ಪ್ರಶ್ನೆಗಳಿಗೆ ಅವಕಾಶವನ್ನೇ ಕೊಡದಂತೆ ತನ್ನ ಕಷ್ಟ-ಸುಖ ಹೇಳಿಕೊಳ್ಳುತ್ತಾನೆ.

ಸಂಜೆಯ ಸಾರಾಯಿಗಾಗಿಯೇ ದುಡಿಯುತ್ತಿದ್ದಾನೇನೋ ಎನಿಸುವ ಹನುಮನ ಬದುಕಿನಲ್ಲಿ ಚಿಂತೆಗಳ ವೈವಿಧ್ಯತೆಗಳಿಗೆ ಕೊರತೆ ಇಲ್ಲ. ಹರಿದ ರವಿಕೆಯ ಹೆಂಡತಿ, ಸಿಂಬಳ ಸುರಿಸುವ ಮಕ್ಕಳು, ಪಕ್ಕದ ಮನೆಯೊಂದಿಗಿನ ಜಗಳ, ಕ್ಯಾಂಟೀನ್ ಹಾಲೇಶಿಯ ಕೈ ಸಾಲ, ದಿನದ ಕೂಳು, ಮಳೆಯ ಯೋಚನೆ, ಊರಿನ ಪುಡಾರಿಯ ಸಮಾಚಾರ ಇಷ್ಟೇ ಅವನ ಪ್ರಪಂಚ. ನಿನ್ನೆ, ಇಂದು, ನಾಳೆ, ನಾಡಿದ್ದು ಎನ್ನುವ ಪರಿವೆಯಿಲ್ಲದ ಏಕತಾನತೆಯ ಬದುಕು. ಆದರೂ ಹನುಮ ಸಂತೃಪ್ತ. ಇವನ ಜೊತೆ ರಾಮನ್ ಬಗೆಗಿನ ಚರ್ಚೆ ಒಂದು ವ್ಯರ್ಥ ಪ್ರಯತ್ನ ಎಂದು ಅರಿತು, ಅವರ ಸಾವಿನ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳುತ್ತಾ ನಿಸಾರ್ ಅಲ್ಲಿಂದ ಹೊರಡುತ್ತಾರೆ.

ಸಮಯ ಕಳೆದಂತೆ ಶಿವಮೊಗ್ಗ ನಗರವು ತನ್ನ ವಿಸ್ತಾರವನ್ನು ಹೆಚ್ಚಿಸಿಕೊಂಡಿದೆ. ಸವಳಂಗ ರಸ್ತೆಯ ಇಕ್ಕೆಡೆಗಳಲ್ಲಿ ಇದ್ದ ನೂರಾರು ಎಕರೆ ಗದ್ದೆಗಳು, ಹತ್ತಾರು ಎಕರೆ ತೆಂಗಿನ ತೋಟಗಳು, ರಸ್ತೆ ಬದಿಯ ಆಲ,ಮುತ್ತುಗ, ನೇರಳೆ, ಹುಣಿಸೆ ಮರಗಳು, ಸದಾ ಕೆಂದಾವರೆಗಳಿಂದ ತುಂಬಿರುತ್ತಿದ್ದ ನವುಲೆ ಕೆರೆ, ಇವೆಲ್ಲವನ್ನೂ ನಗರವು ನುಂಗಿ ತನ್ನ ಹೊಟ್ಟೆಯಲ್ಲಿ ಜೀರ್ಣಿಸಿಕೊಂಡಿದೆ. ಗದ್ದೆಗಳಿಗೆ ನೀರುಣಿಸುತ್ತಿದ್ದ ತುಂಗಾ ಕಾಲುವೆ ಬೇಸಿಗೆಯಲ್ಲಿ ಬೆಂಗಳೂರಿನ ಯಾವುದೇ ರಾಜಾ ಕಾಲುವೆಯನ್ನೂ ಮೀರಿಸುವಂತೆ, ನಗರದ ಕಸವನ್ನು ಹೊತ್ತು ಹರಿಯುತ್ತಿದೆ. ರಾಗಿ ಗುಡ್ಡ ತನ್ನ ಅರೆ ಹಸಿರಿನ ಪೊರೆ ಕಳಚಿಕೊಂಡು ಹಲವು ಕಟ್ಟಡಗಳನ್ನು ತನ್ನ ಮೇಲೆ ಹೊದ್ದು ನಿಂತಿದೆ.

ಈಗೇನಾದರೂ ನಿಸಾರ್ ಬೆಳಗಿನ ವಾಕಿಂಗ್ ಗೆ ಬಂದರೆ ಹನುಮ ಸಿಗುವನೇ? ಸಿಕ್ಕರೂ ಅವನು ಪಾತಿ ಮಾಡುತ್ತಿರುವುದಿಲ್ಲ. " ಹ್ಯಾಂಗದೀರಿ?" ಎಂದು ಕೇಳುವ ವ್ಯವಧಾನವೂ ಅವನಿಗೆ ಇದ್ದಂತಿಲ್ಲ. ರಾಮನ್-ರೇಗನ್ ನಡುವೆ ವ್ಯತ್ಯಾಸ ಕಾಣದ ಅವನ ಮನಸ್ಸು ಕೊರೋನಾ-ಕರಿಯಣ್ಣ ನಡುವೆಯೂ ವ್ಯತ್ಯಾಸ ಕಾಣದು. ಹಣೆಯ ಮೇಲಿನ ಅವನ ಚಿಂತೆಯ ಗೆರೆಗಳು ಇನ್ನಷ್ಟು ದೊಡ್ಡದಾಗಿವೆ. ಕೆಲಸ ಕೊಡುವ ಇವನ ಧಣಿಯ ಕೈ ಬರಿದಾಗಿ, ಹನುಮನ ಕೈಗಳು ವಿಶ್ರಾಂತಿ ಪಡೆಯುತ್ತಿವೆ. ಈ ವಿಶ್ರಾಂತಿ ದೀರ್ಘವೆನಿಸುತ್ತಿದೆ. ಹೆಂಡತಿಯ ಹರಿದ ರವಿಕೆ ಜೊತೆ ಸೀರೆಯೂ ಸೇರಿಕೊಂಡಿದೆ. ಮಕ್ಕಳ ಸಿಂಬಳ ಇನ್ನಷ್ಟು ನೀರಾಗಿ ಹರಿಯುತ್ತಿದೆ. ಮುಚ್ಚಿದ ಸಾರಾಯಿ ಅಂಗಡಿಯ ಮುಂದೆ ಹನುಮ ಹಗಲು-ರಾತ್ರಿ ಅಡ್ಡಾಡುತ್ತಿದ್ದಾನೆ.

ಹಾಗೆ ನೋಡಿದರೆ ಇದು ಹನುಮನೊಬ್ಬನ ಸಮಸ್ಯೆ ಅಲ್ಲವೆನಿಸುತ್ತಿದೆ . ಅವನಿಗೆ ಸಾಲ ಕೊಟ್ಟ "ಪಾರ್ವತೀ ಕ್ಯಾಂಟೀನ್" ಹಾಲೇಶಿ, ದಿನಸಿ ಅಂಗಡಿಯ ಮಲೆಯಾಳಿ ಕಾಕಾ, ಪೆಟ್ಟಿಗೆ ಅಂಗಡಿಯಲ್ಲಿ ಸಲೂನ್ ನಡೆಸುವ ಕಲ್ಲಪ್ಪ, ಕಾಲುವೆ ಬದಿಯಲ್ಲಿ ತರಕಾರಿ ಬೆಳೆದು ಮಾರುವ ಶಿವಣ್ಣ, ಹಾಲು ಮಾರುವ ಗಂಗಮ್ಮ, ಡ್ರೈವರ್ ಮಂಜು, ತಳವಾರ ರುದ್ರಪ್ಪ, ಮದುವೆ -ತಿಥಿಗಳಿಗಳಿಗೆ ಮೈಕ್ ಬಾಡಿಗೆ ಕೊಡುವ ಸೌಂಡ್ ಸಿಸ್ಟಮ್ ಸೀನ, ದರ್ಜಿ ದೋರೋಜಿ ಎಲ್ಲರೂ ಊರ ಗುಡಿಯ ಆಂಜನೇಯನ ಮೊರೆ ಹೋಗಿದ್ದಾರೆ. ಆದರೆ ಅವನೂ ಅಸಹಾಯಕನಾಗಿ ಬಾಗಿಲೊಳಗೆ ಬಂಧಿಯಾಗಿದ್ದಾನೆ. ನೋಡ ನೋಡುತ್ತಿದ್ದಂತೆಯೇ ಎಲ್ಲರೂ ಹನುಮರಾಗುತ್ತಿದ್ದಾರೆ. ಸುತ್ತ ಮುತ್ತಲ ಊರುಗಳಾದ ಅಬ್ಬಲಗೆರೆ, ಬೊಮ್ಮನ ಕಟ್ಟೆ ಎಲ್ಲವನ್ನೂ ಮೀರಿ ಹನುಮೀಕರಣ ವಿಶ್ವ ವ್ಯಾಪಿಯಾಗುತ್ತಿದೆ. ನವುಲೆ ಗ್ರಾಮದ ಹನುಮ,ನ್ಯೂ ಯಾರ್ಕ್ ಸಿಟಿ ಹೆನ್ರಿ ಒಂದೇ ತೆರನಾಗಿ ಕಾಣುತ್ತಿದ್ದಾರೆ. ಕೊರೋನಾ ಕಳೆ ಸವಳಂಗ ರಸ್ತೆ,ಯಿಂದ ವಾಲ್ ಸ್ಟ್ರೀಟ್ ವರೆಗೂ ತುಂಬಿ ತುಳುಕುತ್ತಿದೆ.

"ಕಳೆ ಎಷ್ಟು ಇದ್ದರೇನು? ಕನಸಿರದ ಬಾಳು ಬಾಳೇ?" ಎನ್ನುತ್ತಾ ನಿಸಾರ್ ಅಲ್ಲಿಂದ ಹಿಂದಿರುಗುತ್ತಾರೆ. ಮಾಸ್ಕ್ ಒಳಗಿನಿಂದ ಬಂದ ಅವರ ಮಾತುಗಳು ಯಾರಿಗೂ ಕೇಳಿಸದಾಗಿದೆ.

*(ನಿಸಾರ್ ಅವರೇ ವಾಚಿಸಿದ "ರಾಮನ್ ಸತ್ತ ಸುದ್ದಿ" ವಿಡಿಯೋ ಪ್ರತಿಯನ್ನು ದೊರಕಿಸಿಕೊಟ್ಟ ಗೆಳೆಯ ಭಾಸ್ಕರ್ ತೈಲಗೇರಿ ಅವರಿಗೆ ಲೇಖಕ ಕೃತಜ್ಞ).*



# ಮಗು ಬಂದ ಮನೆ

ಕಾವ್ಯಾ ಕಡಮೆ ನಾಗರಕಟ್ಟೆ

ನೀನು ಬಂದ ಮನೆ
ಹಠಾತ್ ಅಂತರ್ಮುಖಿ
ಹೊರಗಿನ ಗಾಳಿಯೂ ಒಳಬರಲು ಬೆದರಿ
ತಟಸ್ಥ

ದಿನವಿಡೀ ಕೂದಲಿಗೆ ತಾಕದ ಬಾಚಣಿಕೆ
ಕಿವಿಯೇರದ ಕಿವಿಯೋಲೆ
ಆಗಾಗ ತೊಟ್ಟಿಲ ಬಳಿ ಬಂದು
ಮಲಗಿರುವ ದೇವರ ದರ್ಶನ ಪಡೆದೇ
ಎಚ್ಚರದಲೂ ನಿದಿರೆಯಲೂ
ನಿನ್ನದೇ ಕನಸು ಕಂಡು
ಸಮಯ ಸಿಕ್ಕಾಗಲಷ್ಟೇ ಉಂಡು ಎರಡೆರಡು ತುತ್ತು

ಅಮ್ಮನ ತುಟಿ ಅಪ್ಪನ ಕಣ್ಣು ಚಿಕ್ಕಮ್ಮನ ಮೂಗು
ಅತ್ತೆಯ ಕೆನ್ನೆ ಅಜ್ಜಿಯ ಗಲ್ಲ ಅಜ್ಜನ ಪಾದದ ಡೊಂಕು
ಎಲ್ಲವನ್ನೂ ಹೊತ್ತು ಬಂದ ಮಾಯಾ ಪ್ರಾಣವ
ಮುಟ್ಟಲೇ ಹೆದರುವ ಅಜ್ಜ
ತಟ್ಟಿ ಮಲಗಿಸುವ ಅಜ್ಜಿ
ನಸುಕಿನವರೆಗೂ ತೊಟ್ಟಿಲ ಪಕ್ಕವೇ
ಮಂತ್ರ ಮುಗ್ಧ ನಿನ್ನ ತಂದೆ ತಾಯಿ

ಹಗಲಂತೂ ಅಮ್ಮನೂಟ ಮುಗಿವ ತನಕವಾದರೂ
ಮಲಗಿರಲಿ ದೇವರು ಎಂಬುದರತ್ತಲೇ ಎಲ್ಲರ ಚಿತ್ತ
ಕೊನೆಯ ತುತ್ತು ಇನ್ನೇನು ಮುಗಿಸುವಾಗಲೇ
ಮಿಸುಕಾಟ ಕೇಳಿ

ಮಗು,
ಗಾಳಿಯಲ್ಲೇ ನಡೆವ ನಿನ್ನ ಈಜಿನ ಮುಂದೆ
ಸುಲಿದಿಟ್ಟ ಹಣ್ಣು ಕಪ್ಪಾದರೂ ಮಾಫಿ
ನೀನು ಬರುವ ಗಡಿಬಿಡಿಯಲ್ಲಿ ಅಚ್ಚೊತ್ತಿದ
ಅಮ್ಮನ ದೇಹದ ಗಾಯಗಳೂ ಮಾಫಿ
ನಿನ್ನದೇ ಧ್ಯಾನದಲಿ ಅಪ್ಪನ ದುಬಾರಿ ಲ್ಯಾಪುಟಾಪು
ಧಣಾರನೆ ನೆಲಕ್ಕೆ ಬಿದ್ದರೂ ಮಾಫಿ
ಅಜ್ಜಿಯ ದಾವಣಿಯಲ್ಲಿ ಜೊಲ್ಲಿನ ಘಮ
ಅಜ್ಜನ ಶರಟಿನ ಮೇಲೆ ಪ್ರೋಕ್ಷಣೆಯ ಪರಿಮಳ
ಎಲ್ಲವೂ ಮಾಫಿ
ನೀನಲ್ಲಿ ಸ್ವಪ್ನದಲಿ ತುಟಿಯಾಡಿಸಿದರೂ
ಇಲ್ಲಿ ತುಳುಕುವ ನಿನ್ನ ಹಾಲ ಬಟ್ಟಲು
ನೀನೇ ಮರೆತರೂ ನಿದಿರೆಯಲಿ
ತೊಯ್ದು ನಿನ್ನ ಹಸಿವ ನೆನಪಿಸುವುದು

ನಿನ್ನ ಕಲರವದಿಂದಲೇ ಕಲಿತ ಹೊಸ ಪಾಠಗಳಿಗೆ
ಧನ್ಯರಾಗಿ ಸುತ್ತಲೇ ಸುತ್ತುವ
ಸೂರ್ಯಮಂಡಲದ ಗ್ರಹಗಳು ನಾವು
ನಮ್ಮದೆಲ್ಲವನ್ನೂ ಗುರುತ್ವದಲ್ಲೇ ಹಿಡಿದಿಟ್ಟವನು
ಮನ್ನಿಸಬೇಕು ನೀನು ಸೂರ್ಯ ದೇವನು

ಮಗು ಬಂದ ಮನೆ
ಹಠಾತ್ ಅಂತರ್ಮುಖಿ
ಕಟ್ಟಿದ ಮುಷ್ಠಿಯಲ್ಲೇ ಈ ಗೃಹದ
ಬಿಗಿ ಹಿಡಿದ ಉಸಿರು.

#





# ಭಗವಂತನ ನ್ಯಾಯ

*ನಾಗೇಶ ರಾವ್*

ಭಗವಂತನು ಆನಂದ ಸ್ವರೂಪನೆಂದೂ, ಸಗುಣ-ನಿರ್ಗುಣನೆಂದು ಸರ್ವಶಕ್ತ-ಅಪ್ರಮೇಯನೆಂದು ಯಾವುದೇ ರೋಗವಿಲ್ಲದವನೆಂದೂ ಶಾಶ್ವತನೆಂದೂ ವರ್ಣಿಸಲಾಗುತ್ತದೆ. ಇಷ್ಟೆಲ್ಲಾ ಗುಣಪರಿಪೂರ್ಣನಾದ ಭಗವಂತನನ್ನು ತಮ್ಮ ಕಣ್ಣಿಗೆ ಕಾಣಲಿಲ್ಲ ಎಂದೂ ತಮ್ಮ ಕಿವಿಗೆ ಏನೂ ಕೇಳಲಿಲ್ಲ ಎಂದು ತಮ್ಮ ಅನುಭವಕ್ಕೆ ಬರಲಿಲ್ಲ ಎಂದು ಆದ್ದರಿಂದ ಆ ಭಗವಂತನ ಇರುವನ್ನೇ ಕೆಲವರು ಪ್ರಶ್ನಿಸುತ್ತಾರೆ. ಜಗತ್ತಿನಲ್ಲಿ ಅನ್ಯಾಯ ನಡೆಯುತ್ತಿದ್ದರೂ ಆ ಭಗವಂತ ಸುಮ್ಮನಿದ್ದಾನೆಂದು ಕೆಲವರು ಆರೋಪಿಸುತ್ತಾರೆ. ಆದರೇ ಈ ಭಗವಂತ ಎಲ್ಲರಿಗೂ ಎಲ್ಲಕ್ಕೂ ಲಭ್ಯನೆ. ಅವನು ಯಾರಿಗೂ ಅನ್ಯಾಯ ಮಾಡುವುದಿಲ್ಲ ಎಲ್ಲರಿಗೂ ಒಳಿತು ಮಾಡುತ್ತಿರುತ್ತಾನೆ ಎಲ್ಲರಿಗೂ ತನ್ನನ್ನೇ ಕೊಡುತ್ತಾನೆ". "ಅನನ್ಯಾಶ್ಚಿಂತ ಯಂ ತೋ ಮಾಂ ಯೇ ಜನಾಃ ಪರ್ಯುಪಾಸತೇ ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್"" ಅಂದರೆ ಯಾರು ಅವನನ್ನೇ ಕುರಿತು ಅತಿಯಾದ ಭಕ್ತಿ ಆಸಕ್ತಿ ಇಟ್ಟುಕೊಂಡಿರುತ್ತಾರೋ, ಅವರ ಯೋಗಕ್ಷೇಮ ವನ್ನು ಅವನೇ ವಹಿಸುತ್ತಾನೆ ಎಂದರ್ಥ.

ಎಲ್ಲರೂ ಅವರವರ ಸ್ವಭಾವಕ್ಕೆ ಅನುಗುಣವಾಗಿ ಭಗವತ್ತತ್ವವನ್ನು ಉಪಾಸಿಸುತ್ತಾರೆ ಎಲ್ಲರೂ ಆ ದೇವನ ಜೀವಂತ ಹೃದಯವೇ ಆಗಿದ್ದಾರೆ ಎಲ್ಲರ ಹೃದಯದಲ್ಲಿ ಆ ದೇವನೇ ನೆಲಸಿದ್ದಾನೆ.

ಹುಟ್ಟು ಸಾವು ಸುಖ ದುಃಖ ಸೋಲು ಗೆಲುವು ಎಲ್ಲವೂ ಆ ದೇವನ ಜೀವ ವ್ಯಾಪಾರಗಳೇ. ಇದಕ್ಕೆಲ್ಲ ಯಾರೂ ಹೆದರಬಾರದು, ಅವನ್ನು ಅನುಭವಿಸಬೇಕು. ಜೀವಿಗಳ ಜೀವನವೇ ಆ ದೇವನ ಉಪಾಸನೆ. ನಾವು ಈ ಜಗತ್ತಿನಲ್ಲಿ ಕಾಣುತ್ತಿರುವ ವಿಸ್ತಾರವಾದ ಜೀವವೈವಿಧ್ಯ ವಸ್ತುವೈವಿಧ್ಯ ಎಲ್ಲವೂ ಆ ದೇವನ ವಿಭೂತಿ ಅಂದರೆ ಅವನ ಮಹಿಮೆ. ಜೀವದ ನೆಲೆಯಾದ ಈ ಭೂಮಿಯ ತೆರನಾದ ಎಷ್ಟು ಗ್ರಹಗಳಿವೆಯೋ ಎಷ್ಟು ಸೂರ್ಯರಿದ್ದಾರೋ ಎಷ್ಟು ನಕ್ಷತ್ರ ಮಂಡಲ ಇವೆಯೋ ಹೇಳಲು ಸಾಧ್ಯವಿಲ್ಲ. ಇದನ್ನೇ ವಿಜ್ಞಾನವೂ ಹೇಳುತ್ತದೆ. ಆಧ್ಯಾತ್ಮವು ಹೇಳುತ್ತದೆ. ಯಾವ ಭೂಮಿಯಲ್ಲಿ ಜೀವಿಗಳು ಎಷ್ಟು ವಿಕಾಸ ಹೊಂದಿದ್ದಾರೋ ಹೇಳಲಾಗುವುದಿಲ್ಲ. ಹೇಳಲಾಗುವ ಕಾಲವೂ ಬರಬಹುದು

ಶರೀರವನ್ನು ಮೀರಿದ ಇಂದ್ರಿಯಗಳು ಅದನ್ನು ಮೀರಿದ ಮನಸ್ಸೂ ಅದನ್ನೂ ಮೀರಿದ ಬುದ್ಧಿ ಅದನ್ನೂ ಮೀರಿದ ಜೀವ ಚೇತನ. ಇವೆಲ್ಲಾ ಆ ದೇವನ ಪ್ರಸಾದವೇ ಆಗಿದೆ. ಆ ದೇವನ ಜೀವನವನ್ನೇ ನಾವೂ ಜೀವಿಸುತ್ತಿದ್ದೇವೆ "ವಿದ್ಯಾ ವಿನಯ ಸಂಪನ್ನೇ ಬ್ರಾಹ್ಮನೆ ಗವಿಹಸ್ತಿನಿ ಶುನಿ ಚೈವ ಶ್ವಪ್ಯಾಕೇಚ ಪಂಡಿತಾ ಸಮದರ್ಶಿನಃ" ಅಂದರೆ ಪಂಡಿತರಾದವರು ಬ್ರಾಹ್ಮಣನಲ್ಲಿಯೂ ಗೋವಿನಲ್ಲಿಯೂ ಆನೆಯಲ್ಲಿಯೂ ನಾಯಿಯಲ್ಲಿಯೂ ಚಾಂಡಾಲನಲ್ಲಿಯೂ ಆ ದೇವನ ಜೀವ ತತ್ವವನ್ನೇ ಕಾಣುತ್ತಾನೆ. ಆ ದೇವನ ಜೀವ ತತ್ವ ಇಲ್ಲದಿದ್ದರೆ ಇಡೀ ಲೋಕ ಶೂನ್ಯವಾಗಿರುತ್ತಿತ್ತು.

ಅವನಿಂದಲೇ ಎಲ್ಲರಿಗೂ ಎಲ್ಲಕ್ಕೂ ಸುಖ. ಎಲ್ಲರೂ ಧರ್ಮ ಮಾರ್ಗದಲ್ಲಿ ನಡೆದಿದ್ದೇ ಆದರೆ ಒಂದಲ್ಲ ಒಂದು ದಿನ ಎಲ್ಲರಿಗೂ ಸುಖ ಶಾಂತಿ ಸಿಗುವ ಲೋಕ ಮೈದಾಳುತ್ತದೆ. ಶತ ಶತಮಾನಗಳನ್ನು ಏರಿಳಿದು ಸಫಲತೆಯ ಕಡೆಗೆ ನಾವೆಲ್ಲಾ ಸಾಗುತ್ತಿದ್ದೇವೆ. ಸರ್ವರಿಗೂ ಸಿಗುವ ಆ ಜೀವ ತತ್ವ ವನ್ನು ಆರಾಧನೆ ಮಾಡೋಣ ದೇಹ ಸುಖ ಇಂದ್ರಿಯ ಸುಖ ಮಾನಸಿಕ ನೆಮ್ಮದಿ ಕಾಣಬೇಕಾದರೆ ಆ ಜೀವ ಒಂದಿದ್ದರೆ ಮಾತ್ರ ಸಾಧ್ಯ ಅದೊಂದೇ ಆನಂದ ಕೊಡಲು ಸಾಧ್ಯ. "ದೇಹೋ ದೇವಾಲಯ ಪ್ರೋಕ್ತೋ ಜೀವೋಹಂ ಸಃ ಸದಾಶಿವಃ" ಎಂದು ಭಾವಿಸುವುದು ಒಳ್ಳೆಯದು ಎಂದು ಹಿರಿಯರು ಹೇಳಿದ್ದಾರೆ

ಅನಂತ ಕೋಟಿ ದೇಹಿ ಗಳಿಗೆ ಜೀವ ತುಂಬುವ ಕೆಲಸ ಮಾಡುತ್ತದೆ ಆ ಜೀವ ತತ್ವ. ಅಂದಮೇಲೆ ಆ ಭಗವಂತ ಮೋಸಗಾರನೆ? ಖಂಡಿತಾ ಅಲ್ಲ.





# ಜೀ ಮೈನಸ್ ಒನ್

*ಅನಿಲ್ ಭಾರಧ್ವಾಜ್*

ಕಳೆದ ವರ್ಷಗಳ ಸಭೆಗಳಿಗಿಂತ ಈ ವರ್ಷ ಸಭೆಯ ವಾತಾವರಣ ಹೆಚ್ಚು ಆಸಕ್ತಿಕರವಾಗಿತ್ತು. ಕೆಲವು ಅತಿಥಿಗಳು ಎಂದೂ ಇಲ್ಲದ ಗೆಲುವಿನಿಂದ ಉತ್ತೇಜಿತಗೊಂಡಿದ್ದರೆ, ಮತ್ತೆ ಕೆಲವರು ದಿಗ್ಭ್ರಾಂತರಾಗಿರುವುದು ಸ್ಪಷ್ಟವಾಗಿತ್ತು. ಆತಂಕದ ಗಡಿಬಿಡಿಯೋ ಅಥವಾ ಖುಷಿಯ ಸಂಭ್ರಮವೋ ಹೇಳಲು ಸ್ವಲ್ಪ ಕಷ್ಟವೇ ಆಗಿತ್ತು.

ಇದು ಫಿನ್ಲ್ಯಾಂಡ್ನಲ್ಲಿ ನಡೆಯುತ್ತಿದ್ದ ೨೦೨೦ನೇ ಇಸವಿಯ G-1 (ಜೀ ಮೈನಸ್ ಒನ್ ) ಶೃಂಗಸಭೆಯಲ್ಲಿ ಕಂಡುಬಂದ ದೃಶ್ಯ. ಇದು ಪ್ರಪಂಚದಲ್ಲಿ ಅತೀ ವಿಶಿಷ್ಟವಾದ ಸಂಸ್ಥೆಯಾಗಿತ್ತು. ಈ ಸಂಸ್ಥೆಯಲ್ಲಿ ಮನುಷ್ಯನನ್ನು ಬಿಟ್ಟು ಇನ್ನೆಲ್ಲಾ ಜೀವಿಗಳು ಸದಸ್ಯರಾಗುವ ಅವಕಾಶವಿದೆ - ಜಗತ್ತಿನೆಲ್ಲೆಡೆಯ ಪ್ರಾಣಿ-ಪಕ್ಷಿಗಳು, ಸಸ್ಯ-ವೃಕ್ಷಗಳು. ಇದೇ ರೀತಿ, ಮನುಷ್ಯನು ತನ್ನ ಅನುಕೂಲಕ್ಕೆ ತಕ್ಕಹಾಗೆ, G7, G12 ಇತ್ಯಾದಿ ಗುಂಪುಕಟ್ಟಿಕೊಂಡಿದ್ದಾನೆ. ಬೃಹತ್ತಾದ ಆನೆಗಳಾಗಲಿ, ಕಿರಿದಾದ ಇರುವೆಯಾಗಲಿ, ಇಲ್ಲವೇ ಗಗನಚುಂಬಿ ರೆಡ್ ವುಡ್ ಮರವಾಗಲಿ ಅಥವಾ ಲಘುವಾದ ಹುಲ್ಲಾಗಲಿ, ಮನುಷ್ಯನಲ್ಲದಿದ್ದರೆ ಆ ಜೀವಿಗೆ ಇಲ್ಲಿ ಆದರದ ಸ್ವಾಗತ. ಈ ವರ್ಷ ಈ ಸಮಿತಿಯ ೨೫ನೇ ವರ್ಷವಾದ್ದರಿಂದ, ಬೆಳ್ಳಿಹಬ್ಬಕ್ಕೆ ಬೇಕಾಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ, ಸಮಿತಿಯ ತುರ್ತು ಸಭೆಗಾಗಿ ಎಲ್ಲರೂ ನಿರೀಕ್ಷಿಸುತ್ತಿದದ್ದು ಸುಲಭಗ್ರಾಹ್ಯವಾಗಿತ್ತು. ಕೋರಿಕೆಯ ಮೇರೆಗೆ, ತುರ್ತು ಸಭೆಯನ್ನು ಈ ಬಾರಿ ಪ್ರಧಾನ ಭವನದಲ್ಲೇ ನಡೆಸಲು ನಿರ್ಧರಿಸಲಾಗಿತ್ತು. ಒಂದು ಕುರ್ಚಿಯೂ ಖಾಲಿಯಿರದಂತೆ ಎಲ್ಲಾ ಸದಸ್ಯರು ಆಸೀನರಾಗಿದ್ದು, ನಡುವಣ ಹಾದಿಗಳಲ್ಲಿ ಹಲವಾರು ಜೀವಿಗಳು ನಿಂತಿದ್ದು, ಭವನದ ಸಮೂಹ ಕಿಕ್ಕಿರಿದಿತ್ತು. ಈ ವರ್ಷದ ಅಧ್ಯಕ್ಷರಾದ ದಕ್ಷಿಣ ಆಫ್ರಿಕಾದ ಪ್ರತಿನಿಧಿ, ರಿವೆರಿನ್ ಮೊಲ, ಅಧ್ಯಕ್ಷಪೀಠ ಏರಿದಾಗ ಎಲ್ಲರೂ ಎದ್ದು ಗೌರವಾನ್ವಿತ ಕರತಾಡನ ಮಾಡಿದರು. ಅಧ್ಯಕ್ಷರು ಸಭಿಕರನ್ನು ಕೂರಲು ವಿನಂತಿಸಿದ ನಂತರ ಬೈಠಕ್ ಪ್ರಾರಂಭವಾಯಿತು.

"ವರ್ತಮಾನದ ಈ ಜಗತ್ತಿನ ಪರಿಸ್ಥಿತಿಯನ್ನು ಕಂಡು ನಿಮ್ಮೆಲ್ಲರಿಗೂ ಬಹಳ ಪ್ರಶ್ನೆಗಳು ಹಾಗೂ ಅನಿಸಿಕೆಗಳು ಇರುವುದು ಸಹಜ. ಅದನ್ನು ನಾವು ನಿರೀಕ್ಷಿಸಿದ್ದೆವು. ಹಾಗಾಗಿಯೇ ಹೆಚ್ಚು ವಿಳಂಬ ಮಾಡದೆ, ಪ್ರದಕ್ಷಿಣಾ ರೀತಿ, ಆವರ್ತನೆಯಂತೆ, ಸದಸ್ಯರು ತಮ್ಮ ಹೇಳಿಕೆ ಅಥವಾ ಅನಿಸಿಕೆ ಈಗಿಂದಲೇ ಮಂಡಿಸಬಹುದಾಗಿದೆ," ಅವಸರದಿಂದಲೇ ಮೊಲ ನುಡಿಯಿತು.

"ನಾನು ಅಮೇರಿಕಾದ ನ್ಯೂ ಜೆರ್ಸಿ ಪ್ರದೇಶದಿಂದ ಬಂದಿದ್ದೇನೆ. ನಮ್ಮ ಗುಂಪುನಲ್ಲಿ, ಮರಿಗಳನ್ನೂ ಸೇರಿಸಿಕೊಂಡರೆ, ಸುಮಾರು ಮೂವತ್ತೈದು ಜಿಂಕೆಗಳಿವೆ. ಈ



ರೀತಿಯ ಗುಂಪುಗಳು ನಮ್ಮ ಪ್ರದೇಶದಲ್ಲಿ ಸಾವಿರಾರು ಇವೆ. ಹಲವು ವರ್ಷಗಳಿಂದ ಮನುಷ್ಯರು ನಮ್ಮ ಕಾಡುಗಳ ಮೇಲೆ ಧಾಳಿಮಾಡಿ, ಅಲ್ಲಿನ ಮರಗಳನ್ನು ನೆಲಸಮ ಮಾಡಿ, ತಮ್ಮ ಭವ್ಯವಾದ ಮನೆಗಳನ್ನು ಕಟ್ಟಿಕೊಂಡು, ಅದಕ್ಕೆ ಬೇಕಾದ ರಸ್ತೆಗಳನ್ನು ಮಾಡಿಕೊಂಡು, ವೇಗದ ಕಾರು-ವ್ಯಾನುಗಳಲ್ಲಿ ಸ್ವೇಚ್ಛೆಯಾಗಿ, ತಪ್ಪನಿಸಿಕೆ ಇಲ್ಲದೇ ಅಡ್ಡಾಡುತ್ತಿದ್ದಾರೆ. ಈ ವಾಹನಗಳ ಆರ್ಭಟಕ್ಕೆ, ವಾರಕ್ಕೊಮ್ಮೆಯಾದರೂ, ನಮ್ಮವರಲ್ಲೊಬ್ಬರು ಬಲಿಯಾಗುತ್ತಾರೆ. ನಾವು ಆಹಾರ ಅಥವಾ ಸಂಗಾತಿ ಅರಸಿಕೊಂಡು ಹೋಗುವುದು, ಯುದ್ಧಕ್ಕೆ ಹೋದಷ್ಟೇ ಅಪಾಯ. ವಾಪಸ್ಸು ಎಷ್ಟು ಮಂದಿ ಬರುವರೋ ಎಂಬ ಆತಂಕ ಸದಾ ಕಾಡುತ್ತಿರುತ್ತದೆ. ಆದರೆ ಅದೇನೋ ಪರಮಾಶ್ಚರ್ಯ! ಕಳೆದ ಒಂದೆರಡು ಹುಣ್ಣಿಮೆಗಳಿಂದ ನಮ್ಮ ಗುಂಪಿನಲ್ಲಿ ಮೃತರಾದವರು ಇಲ್ಲವೇ ಗಾಯಗೊಂಡವರು ಇಲ್ಲವೇ ಇಲ್ಲ. ಮನುಷ್ಯನ ಆ ರಾಕ್ಷಸೋಪಾಧಿಯ ವಾಹನಗಳು ರಸ್ತೆಗಳಲ್ಲಿ ಅಲ್ಲೊಂದು ಇಲ್ಲೊಂದು. ನಮ್ಮ ಮಕ್ಕಳನ್ನು ಆಡಲು ಬಿಡಲು ನಮಗೆ ಅಷ್ಟು ಭಯವಾಗುತ್ತಿಲ್ಲ. ಅದೇ ಖುಷಿಯಲ್ಲಿ, ಧೈರ್ಯಮಾಡಿ, ವಾಷಿಂಗ್ಟನ್ ಡೀಸೀ ಬಳಿಯ ನಮ್ಮ ಚಿಕ್ಕಪ್ಪನ ಗುಂಪನ್ನು, ಹತ್ತು ವರ್ಷದಲ್ಲಿ ಮೊದಲನೆಯದಾಗಿ ಸಂಧಿಸಿ ಬಂದೆವು. ಪ್ರಯಾಣದಲ್ಲೂ ಹಾಗೂ ಆ ಜಾಗದಲ್ಲೂ ಅದೇ ಪ್ರಶಾಂತ ವಾತಾವರಣ - ವಾಹನಗಳ ಅಬ್ಬರವಾಗಲಿ, ಮನುಷ್ಯನ ಸುಳಿವಾಗಲಿ ಇಲ್ಲವೇ ಇಲ್ಲ. ಹೋಗಿದ್ದ ಎಲ್ಲರೂ ಮತ್ತೆ ಹಿಂತಿರುಗಿ ಬಂದೆವು - ಒಬ್ಬರನ್ನೂ ಕಳೆದುಕೊಳ್ಳಲಿಲ್ಲ. ನಾನು ನಂಬಲಾಗದೆ ಮಾರೆಣಿಕೆ ಮಾಡಿ ನೋಡಿದೆ. ಉಹೂ! ಎಲ್ಲರೂ ಸುರಕ್ಷಿತ!," ಸುಂದರವಾದ ಕಾವಲ್ಗೊಂಬುಗಳಿದ್ದ, ದೃಢಕಾಯದ ಜಿಂಕೆರಾಯ ಸಂತಸದಿಂದ ನುಡಿದ.

"ಹೌದಾ?! ನಾನು ಅದನ್ನೇ ಹೇಳುವನಿದ್ದೆ. ನಮ್ಮ ಜಾಗ ನಮಗೆ ಬಿಟ್ಟುಕೊಟ್ಟರೋ ಏನೋ ತಿಳಿಯದು. ಅವರ ವಾಹನಗಳಡಿ ಸಿಲುಕಿ ಚಟ್ನಿಯಾಗದೆ ಹಾಯಾಗಿ ಓಡಾಡಿಕೊಂಡಿದ್ದೇವೆ," ಕೂಡಿಸಿತು ಬೂದಿ ಮತ್ತು ಕಪ್ಪುಬಣ್ಣದ ಮೃದು ತುಪ್ಪುಳವಿದ್ದ ರಾಕೂನ್.

ಇದೇ ರೀತಿಯ ಅನುಭವಗಳಾದ ಹತ್ತಾರು ಪ್ರಾಣಿಗಳು ಕುರ್ಚಿಯಿಂದ ಎದ್ದು, ಸಂತೋಷದಿಂದ ಕುಣಿಯತೊಡಗಿದವು. ಕೆಲವು ಪ್ರಾಣಿಗಳು ತಮ್ಮದೇ ವಿಭಿನ್ನ ಕಂಠದಿಂದ ಹಾಡಿದರೆ, ಮತ್ತಿಷ್ಟು ಪಶುಗಳು ತಮ್ಮ ಕೈ-ಕಾಲು ಬಾಲಗಳಿಂದ ಮೇಜು ಬಡಿಯುತ್ತಿದ್ದವು. ಕಾಡಿನ ಯಾವುದೋ ಹಬ್ಬವೋ ಇಲ್ಲವೇ ಜಾತ್ರೆಯ ವಾತಾವರಣ ಸೃಷ್ಟಿಸಿತ್ತು.

"ಆರ್ಡರ್! ಆರ್ಡರ್!" ಮೊಲ ಎಲ್ಲರಿಗೂ ಉಪಸ್ಥಿತರಾಗಲು ಆದೇಶಿಸಿತು. "ನಾವಿನ್ನೂ ಬಹಳಷ್ಟು ಪ್ರತಿನಿಧಿಗಳ ಮಾತು ಕೇಳುವುದಿದೆ. ದಯವಿಟ್ಟು ನಿಮ್ಮ ನಿಮ್ಮ ಜಾಗಗಳಿಗೆ ದಯಮಾಡಿಸಿ. ಮುಂದಿನ ಸರದಿ ಗರಿಕೆ ಹುಲ್ಲಿನವರದ್ದು," ಹುಲ್ಲಿನ ಕಡೆ ಕೈ ಮಾಡಿ ಮಾತು ಶುರುಮಾಡಲು ನಿರ್ದೇಶಿಸಿತು.

"ನಮಗೂ ಈಗಿನ ಪರಿಸ್ಥಿತಿ ತುಸು ವಿಸ್ಮಯಕಾರಿಯಾಗಿದೆ. ನಮ್ಮ ಕಾಡಿನ ಹುಲ್ಲು ಮಿತ್ರರು ತಾವು ಹಲವಾರು ಅಡಿಯೆತ್ತರ ಬೆಳೆಯುತ್ತೇವೆ ಎಂದಾಗ ನಮಗೆ ಅಚ್ಚರಿಯೂ ಹಾಗೂ ಆ ರೀತಿ ಬೆಳೆಯಲು ನಮಗೆ ಅಸಾಧ್ಯವೆಂದು ಬೇಸರವೂ ಆಗುತಿತ್ತು. ನಾಲ್ಕೈದು ಅಂಗುಲಕ್ಕಿಂತ ಹೆಚ್ಚು ಬೆಳೆದ ಅನುಭವವೇ ಇಲ್ಲ.ಆ ಮಾನವರ ಪ್ರದರ್ಶನ ಮತ್ತು ಅಲಂಕಾರದ ವಸ್ತುವಾಗಿರುವ ನಮಗೆ, ಸಹಜವಾಗಿ ಬೆಳೆಯುವ ಅದೃಷ್ಟವೇ ಇಲ್ಲ. ಆದರೆ ಇತ್ತೀಚೆಗೆ, ನಮ್ಮ ತಲೆಯನ್ನು ಬಾರಿ ಬಾರಿಗೆ ಕತ್ತರಿಸುವ ಆ ಮಾನವರ ಯಂತ್ರಗಳ ಕಾಟವೇ ಇಲ್ಲ. ನಮ್ಮ ಪಂಗಡದಲ್ಲಿ ಎಲ್ಲರೂ ಬಹುಮಟ್ಟಿಗೆ ಒಂದು ಅಡಿ ತಡೆಯಿಲ್ಲದೆ ಬೆಳೆದಿದ್ದೇವೆ. ಅಷ್ಟು ಎತ್ತರದಲ್ಲಿ ನಮ್ಮ ಸುತ್ತಲೂ ನೋಡುವುದೇ ಒಂದು ಹಿಗ್ಗು! ಕೆಲವರಿಗಂತೂ ತೆನೆಗಳೂ ಬಿಟ್ಟಿರುವುದು ಕಂಡು ಅವರ ನೈಜ ರೂಪು ಅಚ್ಚರಿ ಉಂಟುಮಾಡಿದೆ. ತಂಗಾಳಿ ಬೀಸಿದಾಗ ತೂಗಾಡಿ ಒಬ್ಬರನ್ನು ಮೆಲ್ಲನೆ ದೂಡಿದಾಗ ಸಮುದ್ರದ ಅಲೆಯಂತೆ ಆಡುತ್ತಿದ್ದರೆ ಆಗುವ ಸಂತೋಷ ಅವಿವರಣೀಯ," ತನ್ನ ಹರ್ಷದಲ್ಲಿ ಮೈಮರೆತಿತ್ತು ಆ ಹುಲ್ಲು.

"ನಮ್ಮ ಎಲೆಗಳು ಇಷ್ಟು ಶುಚಿಯಾಗಿರುವುದು ನನ್ನ ಜಾಯಮಾನದಲ್ಲೇ ನೋಡಿಲ್ಲ. ಪ್ರತೀ ದಿನ ನಮ್ಮ ಎಲೆಗಳ ಮೇಲೆ ಬಂದು ಕೂರುವ ಅಸಹ್ಯಕರ, ಕೊಳಕು ಧೂಳು ಈಗ ನಾಪತ್ತೆ. ನಾವು ನಿರಾಳವಾಗಿ ಉಸಿರಾಡಬಹುದು. ನಮ್ಮ ಸ್ವಾಭಾವಿಕ ಹಸಿರು, ಕಂದು ಬಣ್ಣಗಳು ಎದ್ದು ಕಾಣುತ್ತಿದೆ. ವಿರಹಿಸಲು ನಮ್ಮಲ್ಲಿ ಬರುವ ಪಕ್ಷಿಗಳಲ್ಲೂ ಎಲ್ಲಿಲ್ಲದ ಹುಮ್ಮಸ್ಸು. ಜಗತ್ತೆಲ್ಲೆಡೆ ಟಿಂಬರ್ ಗಾಗಿ ನಮ್ಮನ್ನು ಕಡಿಯುವುದು ಮನುಷ್ಯ ಕಡಿಮೆ ಮಾಡಿಬಿಟ್ಟಿದ್ದಾನೆ. ಮಾನವನು ಹಠಾತ್ತನೆ ಮಾಡಿರುವ ಈ ನಡವಳಿಕೆಯ ಬದಲಾವಣೆಯಿಂದ ಓಜೋನ್ ಪದರದ ರಂಧ್ರವೂ ಮುಚ್ಚಿದ್ದು, ನಮ್ಮನ್ನು ಗೋಳಾಡಿಸುವ ಯೂವಿ ಕಿರಣಗಳೂ ಕಡಿಮೆಯಾಗಿವೆ ಎಂದು ಸುದ್ದಿ ಬಂದಿವೆ," ಗೆಲುವಿನಿಂದ ನುಡಿಯಿತು ಬೀಜಿಂಗ್ ನಿಂದ ಬಂದಿದ್ದ ಮರಗಳ ಪ್ರತಿನಿಧಿ, ಪಗೋಡ ವೃಕ್ಷ.

"ಈಗ ಸ್ವಲ್ಪ ಜಲಚರ ಪಶುಗಳ ಅನುಭವ ಮತ್ತು ಅಭಿಪ್ರಾಯಗಳನ್ನು ತಿಳಿಯೋಣ ಬನ್ನಿ ," ಅಧ್ಯಕ್ಷ ಮೊಲ, ಭಾರತದ ಗಂಗಾನದಿಯಿಂದ ಬಂದ ಶಾರ್ಕ್ ಮೀನಿಗೆ ಮಾತನಾಡಲು ಸೂಚಿಸಿತು.

"ನೀರಿನ ಮಾಲಿನ್ಯ ಗಮನಾರ್ಹವಾಗಿ ಕಡಿಮೆಯಾಗಿ ಹೋಗಿದೆ. ನಮಗೆ ಉಸಿರಾಡಲು ಬೇಕಾದ ಆಮ್ಲಜನಕವೇ ಕಡಿಮೆಯಾಗಿದ್ದ ಈ ನೀರಿನಲ್ಲಿ ಈಗ ಹೇರಳವಾಗಿ ನಮ್ಮ ಪ್ರಾಣವಾಯು ಸಿಗುತ್ತಿದೆ. ಮೊದಲು ನಮ್ಮ ನೀರು ಬರಿದೆ ಬಟ್ಟೆ ಒಗೆಯಲು, ಪಾತ್ರೆತೊಳೆಯಲು ಯೋಗ್ಯ ಎನ್ನುತ್ತಿದ್ದ ಮಾನವ ವಿಜ್ಞಾನಿಗಳು ಕಳೆದ ಎರಡು-ಮೂರು ತಿಂಗಳಲ್ಲಿ ನಮ್ಮ ಪವಿತ್ರ ಜಲ ಅವನು ಕುಡಿಯಲು ಯೋಗ್ಯಯೆಂದು ಘೋಷಿಸಿದ್ದಾನೆ!. ಮೀನುಗಳನ್ನು ಲಕ್ಷಾಂತರ ಪ್ರಮಾಣದಲ್ಲಿ ಹಿಡಿಯುವ ಮನುಷ್ಯರ ಆ ದೊಡ್ಡ ಹಡಗುಗಳೂ ಬಹಳ ಕಡಿಮೆಯಾಗಿವೆ ಎಂದು ನಮ್ಮ ಸಮುದ್ರ ಸ್ನೇಹಿತರು ತಿಳಿಸಿದ್ದಾರೆ. ಕುತೂಹಲಕಾರಿ

ವಿಷಯವೆಂದರೆ ವೆನಿಸ್ ನ ಕಾಲುವೆಗಳಲ್ಲಿಯೂ ನೆಮ್ಮದಿಯ ಪರಿಸರ ನಿರ್ಮಾಣವಾಗಿದೆಯಂತೆ. ನಮ್ಮ ಮತ್ಸ್ಯ ಸ್ನೇಹಿತರ ಪ್ರಕಾರ ಅಲ್ಲಿ ಇಷ್ಟು ತಿಳಿಯಾದ, ಕಲುಷರಹಿತ ನೀರು ಅವರು ಅದೆಷ್ಟೋ ವರ್ಷಗಳಿಂದ ನೋಡಿಲ್ಲವಂತೆ. ಮಾನವರ ದೋಣಿಗಳ ಬಾಧೆಯಿಲ್ಲದೆ ಬಾತುಕೋಳಿಗಳು, ಹಂಸಗಳು ಇತ್ಯಾದಿ ಶಾಂತಿಯಿಂದ ವಿರಮಿಸುತ್ತಿವೆಯಂತೆ. ಗಮ್ಮತ್ತಿನ ವಿಷಯವೆಂದರೆ ಎಷ್ಟೋ ದಶಕಗಳ ನಂತರ ಸಮುದ್ರ ಆಮೆಗಳು ಬಂಗಾಳ ಕೊಲ್ಲಿಯಲ್ಲಿ ಮೊಟ್ಟೆಯಿಡಲು ಹೋಗುತ್ತಿವೆ. ಕೆಲವೊಮ್ಮೆ ಮನುಷ್ಯನ ಈ ಹಿತವಾದ ವರ್ತನೆ ನಿಜವೇ? ಇಲ್ಲವೇ, ನಮ್ಮ ಭ್ರಮೆಯೇ? ಎಂಬ ಕಳವಳ ಮನಸ್ಸಲ್ಲಿ ಬರುತ್ತದೆ," ಗೊಂದಲಗೊಂಡಂತಿದ್ದ ಶಾರ್ಕ್ ಮೀನು ಹೇಳಿತು.

"ಈ ಮನುಷ್ಯನ ನಡತೆಯಲ್ಲಿನ ಪರಿವರ್ತನೆ ಬಗ್ಗೆ ತರ್ಕಿಸುವ ಮುನ್ನ, ಈವತ್ತಿನ ನಮ್ಮ ವಿಶೇಷ ಆಹ್ವಾನಿತರಾದ ಕೊರೊನ ವೈರಾಣು ಒಂದೆರಡು ಮಾತನಾಡುತ್ತಾರೆ," ಮೊಲ ಮಧ್ಯೆ ನಿಲ್ಲಿಸಿತು.

ಜಬರ್ದಸ್ತಾದ ಕರತಾಡನ ಮತ್ತು ಜಯಘೋಷದಿಂದ, ಎದ್ದು ನಿಂತು, ವಿಶೇಷ ಅತಿಥಿಗಳನ್ನು ಸಭೆ ಸ್ವಾಗತಿಸಿತು. ಉತ್ಸಾಹಪೂರ್ಣ ಆದರ ಸ್ವಲ್ಪ ಕ್ಷೀಣಿಸಿದ ಮೇಲೆ ಕೊರೊನ ವೈರಾಣು ತನ್ನ ಮಾತು ಶುರುಮಾಡಿತು.

"ಎಲ್ಲರಿಗೂ ಧನ್ಯವಾದಗಳು. ನಿಮ್ಮೆಲ್ಲರ ಅಮಿತೋತ್ಸಾಹಕ್ಕೆ ನಾವು ಕಾರಣವಿರಬಹುದು ಎಂದು ಕೇಳಿದರೆ ನಮಗೆ ಖುಷಿಯಷ್ಟೇ ಸಂಕೋಚವೂ ಆಗುತ್ತಿದೆ. ನಾವೊಂದು ಜೀವವೂ ಇಲ್ಲದ ಪರಾವಲಂಬಿ ಅಣುಗಳು. ನಾವು ಹಲವು ರೂಪಗಳಲ್ಲಿ ನೂರಾರುಕೋಟಿ ವರ್ಷಗಳಿಂದ ಭೂಮಿಯ ಮೇಲೆ ಇದ್ದೇವೆ. ಇತರೆ ಜೀವಿಗಳಂತೆ ನಮ್ಮ ಪೀಳಿಗೆಯನ್ನು ಉಳಿಸುವುದು ಹಾಗೂ ಬೆಳೆಸುವುದು ನಮ್ಮ ಗುರಿಗಳಲ್ಲೊಂದು. ಅದಕ್ಕೆ ಹಲವಾರು ಪ್ರಾಣಿಗಳ ಆಸರೆ ನಾವು ತೆಗೆದುಕೊಳ್ಳುತ್ತೇವೆ. ಆ ಜೀವಿಗಳಿಗೆ ಇದು ಸಂತಸ ತರುವ ವಿಷಯವಲ್ಲ. ಆದರೆ ಇದು ಕಾಡಿನ ನ್ಯಾಯ ಅಥವಾ ಜೀವನದ ನ್ಯಾಯ ಎಂದು ಹೇಳಬಹುದು. ಹೇಗೆ ಸಾರಂಗವನ್ನು ಬೇಟೆಯಾಡುವ ಸಿಂಹವು ತನ್ನ ಜೀವನದ ಧರ್ಮ ಪಾಲಿಸುತ್ತಿದೆಯೋ ಹಾಗೆಯೇ. ನಮಗೆ ಆಶ್ರಯದಾತನಾದ ಜೀವಿಯು ನಮ್ಮನ್ನು ತಿರಸ್ಕರಿಸಿದರೆ ಇಲ್ಲವೇ ನಮ್ಮ ವೃದ್ಧಿಗೆ ಪ್ರತಿರೋಧ ಶಕ್ತಿ ತೋರಿಸಿದರೆ, ನಾವೂ ಅನ್ಯ ಜೀವಿಗಳಂತೆ, ನಮ್ಮ ವಂಶವಾಹಿ ಸ್ವರೂಪವನ್ನು ಬದಲಾಯಿಸುತ್ತಾ ನಮ್ಮ ಉಳಿವನ್ನು ಕಾಪಾಡಲು ಯತ್ನಿಸುತ್ತೇವೆ. ಇತ್ತೀಚಿನ ನಮ್ಮ ಈ ಸ್ವರೂಪದಿಂದ ಮನುಷ್ಯ ಪ್ರಾಣಿಗೆ ಇಷ್ಟೆಲ್ಲಾ ಅಸ್ವಸ್ಥತೆ ಆಗಿರುವುದು ನಮಗೆ ಕೊಂಚ ದಂಗುಬಡಿದಂತಾಗಿದೆ ಎಂದೇ ಹೇಳಬಹುದು. ಜಗತ್ತಿನ್ನ ಎಲ್ಲ ಜೀವರಾಶಿಗಳೂ ತನ್ನ ಹತೋಟಿಯಲ್ಲಿ ಹಾಗೂ ತನ್ನ ಸ್ವಚ್ಛಂದ ಬಳಕೆಗಾಗಿಯೇ ಇರುವ ಬರಿಯ ವಸ್ತುಗಳು ಎಂಬ ಮೂರ್ಖ ಭ್ರಾಂತಿಯಲ್ಲಿರುವ ಈ ಮಾನವ ವರ್ಗಕ್ಕೆ ಒಂದು ತಾತ್ಕಾಲಿಕ ತಡೆ ನಾವು ಕೊಟ್ಟಿದ್ದರೆ, ಅದಕ್ಕೆ ನಾವು ಕೊಂಚ ಸಂತೃಪ್ತರೇ ಎಂದು ಹೇಳಬಹುದೇನೋ. ನಮ್ಮಿಂದ ನಿಮ್ಮೆಲ್ಲರ ಜೀವನದಲ್ಲಿ ಅವನ ದುಷ್ಕೃತ್ಯಗಳಿಂದ ಸ್ವಲ್ಪ ವಿರಾಮ ಸಿಕ್ಕಿದ್ದರೆ ಅದಕ್ಕೆ ನಾವು ಸಕಾರಾತ್ಮಕವಾಗಿ ಸ್ಪಂದಿಸುತ್ತೇವೆ. ಆದರೆ ನಮ್ಮನ್ನು ಕೀರ್ತಿಶಾಲಿಗಳಂತೆ ಆರಾಧಿಸುವ ಅಗತ್ಯ ನಮಗೆ ಕಾಣುತ್ತಿಲ್ಲ. ಎಲ್ಲರೂ ಪ್ರಾಪಂಚಿಕ ಧರ್ಮ ಪಾಲಿಸುತ್ತಾ ಬದುಕೋಣ," ಭಾಷಣ ಮುಗಿಸಿತು ಕೊರೊನ ವೈರಾಣು.

"ಈಗ ಈ ಅಧಿವೇಶನದ ಕೊನೆಯ, ಆದರೆ ಪ್ರಾಮುಖ್ಯತೆಯಲ್ಲಿ ಕನಿಷ್ಠವಲ್ಲದ ಭಾಷಣಕಾರರು, ನಮ್ಮೆಲ್ಲರ ನೆಚ್ಚಿನ ಮತ್ತು ಅತ್ಯಂತ ಹಿರಿಯ ಪ್ರತಿನಿಧಿಗಳಾದ ಗ್ಯಾಲಪಗೋಸ್ ದ್ವೀಪದ ಆಮೆ," ಮೊಲ ಎದ್ದು ನಿಂತು ಗೌರವ ಸೂಚಿಸಿತು.

"ಎಲ್ಲರಿಗೂ ನಮಸ್ಕಾರಗಳು. ನೀವು ಮತ್ತು ನಿಮ್ಮ ರಾತ್ರಿಯೂಟದ ಮಧ್ಯೆ ನಾನು ವಿಘ್ನವಾಗಿ ನಿಂತಿರುವುದು ನನಗೆ ತಿಳಿದಿದೆ. ಅಧ್ಯಕ್ಷರು ಸದ್ಯದ ಪರಿಸ್ಥಿತಿಯ ಬಗ್ಗೆ ಈ ಮುದುಕನ ದೃಷ್ಟಿಕೋನ, ಇಲ್ಲಿ ನೆರೆದಿರುವರಿಗೆ ಮಾರ್ಗದರ್ಶಕವಾಗಬಹುದೆಂದು, ನನ್ನ ಅಭಿಪ್ರಾಯ ಹಂಚಿಕೊಳ್ಳಲು ಸೂಚಿಸಿದ್ದಾರೆ. ಮಾನವರ ನಡವಳಿಕೆಯಲ್ಲಿನ ಈ ವಿಪರೀತದ ಬದಲಾವಣೆ, ನಮ್ಮೆಲ್ಲರಿಗೂ ಆಹ್ಲಾದಕೊಟ್ಟಿದೆಯಾದರೂ, ನಾವು ಇದನ್ನು ಸ್ವಲ್ಪ ನಿರಾಶಾವಾದಿಗಳಂತೆ ವಿಶ್ಲೇಷಿಸಬೇಕಾಗಿದೆ. ನಮ್ಮ ಅನುಭವದಿಂದ ಹೇಳಬೇಕಾದರೆ, ಮನುಷ್ಯ ತನ್ನ ಅಸ್ತಿತ್ವಕ್ಕೆ ಧಕ್ಕೆ ಬಂದಾಗ, ಈ ರೀತಿಯಾಗಿ ಅನ್ಯಜೀವಿಗಳೊಂದಿಗೆ ಸಕಾರಾತ್ಮಕವಾಗಿ ವರ್ತಿಸಿರುವ ಪೂರ್ವ ನಿದರ್ಶನಗಳಿವೆ. ದುರದೃಷ್ಟಕರ ವಿಷಯವೆಂದರೆ, ಆ ಪ್ರಾಣಿ ತನ್ನ ಈ ಪರಾಜಯದಿಂದ ಚೇತರಿಸಿಕೊಂಡಾಕ್ಷಣ, 'ನಾಯಿ ಬಾಲ ಯಾವಾಗಲೂ ಡೊಂಕೇ' ಎನ್ನುವ ಹಾಗೆ ತನ್ನ ಹಳೇ ಚಾಳಿಯನ್ನು ಮುಂದುವರಿಸಿಕೊಂಡು ಹೋಗಿದ್ದಾನೆ. 'ಈಗ ನಾವೇನು ಮಾಡುವುದು? ಈ ಒಸಗೆ ಸ್ಥಿರವೇ? ಇದು ಹೊಸ ಮಾಮೂಲೇ?' ಹೀಗೆ ಹಲವಾರು ಪ್ರಶ್ನೆಗಳು ನಿಮ್ಮನ್ನು ಕಾಡುವುದು ಸಹಜ. ಆದರೆ ಮನುಷ್ಯನು 'ನಾನು ಒಡೆಯ, ಅನ್ಯಜೀವಿಗಳು ನನ್ನ ಗುಲಾಮರು ಅಥವಾ ನನಗಾಗಿರುವ ಸಂಪನ್ಮೂಲಗಳು' ಎಂಬ ಸ್ವಕೇಂದ್ರಿತ ನಿಲುವನ್ನು ಅಷ್ಟು ಸುಲಭವಾಗಿ ಸಡಿಲಿಸುತ್ತಾನೆ ಎಂಬ ಹೆಬ್ಬಯಕೆಗೆ ನಮ್ಮ ಮನಸ್ಸಿನಲ್ಲಿ ನೆಲೆನೀಡಿದರೆ ಅದು ಮೂರ್ಖನ ಸ್ವರ್ಗದಂತಾಗುತ್ತದೆ. ಇದು ಜಗತ್ತಿನ ನವೋದಯವೋ ಅಥವಾ ಹೊಸ ದಿಗಂತವೋ ಎಂದು ಹಿಗ್ಗದೆ, ಈ ಬದಲಾವಣೆ ಇರುವಷ್ಟು ದಿನ, ಅದನ್ನು ನಾವು ಆನಂದದಿಂದ ಅನುಭವಿಸಿ, ಈ ಮನುಷ್ಯ ಪ್ರಾಣಿ, ತನ್ನ ಪ್ರಾಬಲ್ಯದ ಈ ಪರೀಕ್ಷೆಯಿಂದ ಹೊರಬಂದಾಗ, ಸೊಕ್ಕಿದ ಪಶುವಾಗಿರದೆ, ಒಬ್ಬ ವಿನೀತ , ಭೂಮಿಯ ನೀತಿಸಮ್ಮತನಾದ ಸದಸ್ಯನಾಗಿರುತ್ತಾನೆ ಎಂದು ಆಶಿಸೋಣ. ಸರ್ವೇ ಭವಂತು ಸುಖಿನಃ ," ಧನ್ಯವಾದಗಳೊಂದಿಗೆ ಮುಕ್ತಾಯಗೊಳಿಸಿತು ವೃದ್ಧ ಕೂರ್ಮ



# ಹಸಿರ ಕೊಡುಗೆ

ರಾಜಶ್ರೀ ಹಿತೇಶ್ ರಾವ್

*ಒಮ್ಮೆ ತಾಯಿಯಾಗಿ ನಿನ್ನ ಸಲಹುವ ಆಸೆ,*
*ಮತ್ತೊಮ್ಮೆ ಮಗುವಾಗಿ ನಿನ್ನ ಮಡಿಲಲ್ಲಿ ಮಲಗುವ ಆಸೆ.*
*ಸದಾ ವಿಷ ಕಕ್ಕುವ ಮಾನವಗೆ ಹಸಿರ ಉಣಿಸುವ ಮಾತೆ,*
*ನಿನ್ನ ಋಣವ ತೀರಿಸಲಾರೆ ಹೇ ನಿಸರ್ಗದಾತೆ.*
*ಸಕಲ ಸೌಂದರ್ಯದ ಘನಿ ನೀನು ನಮಗೆ,*
*ಸ್ಮರಿಸಲೇ ಬೇಕು ನಿನ್ನ,ನಮಗಿತ್ತ ಅಪಾರತೆಗೆ.*
*ಪೊರೆ ಎಮ್ಮ ತಾಯೆ, ಕ್ಷಮಯಾ ಧರಿತ್ರಿಯೆ,*
*ಸ್ವೀಕರಿಸು ನನ್ನ ಈ ಪುಟ್ಟ ಕೊಡುಗೆ,*
*ನಿನ್ನ ಈ ಔದಾರ್ಯತೆಯ ಸಿರಿ ಸಂಪತ್ತಿಗೆ.*





# ಅಮ್ಮ- ಅಪ್ಪ



*ಮೇ ನಲ್ಲಿ ಅಮ್ಮನ ದಿನವಾದರೆ*
*ಜೂನ್ ನಲ್ಲಿ ಅಪ್ಪನ ದಿನದ*
*ಸಂಭ್ರಮ*

*ಬೃಂದಾವನದ ಮಕ್ಕಳು ಈ*
*ಸುಸಂಧರ್ಭದಲ್ಲಿ  ಸುಂದರವಾದ*
*ಕವಿತೆಗಳ ರಚಿಸಿದ್ದಾರೆ.*
*ಓದಿ, ಆನಂದಿಸಿ. ನಿಮ್ಮ ತಂದೆ*
*ತಾಯಿಗಳಿಗೆ ಓದಿ ಹೇಳಿ*





# ಅಮ್ಮಾ

ಮಾನಸ ನಟರಾಜ್

ನಾ ಹುಟ್ಟಿದಾಕ್ಷಣ ಅತ್ತೆ, ಆದರೆ ನೀ ಆಗ ನಕ್ಕೆ
ಮುಂದೆಂದೂ ನಾ ಅಳದಿರಲಿ ಎಂದು ಆಶಿಸಿದೆ

ನಾ ಕೈ ಚಾಚಿ ಅಮ್ಮಾ ಎಂದೆ, ನೀ ಓಡಿ ಬಂದು
ಓ ನನ್ನ ಕಂದ ಎಂದೆ



ಗುಮ್ಮಾ ಬರುವನೆಂದು ಭಯಪಟ್ಟೆ, ನಾನಿರುವೆ ಎಂದು
ನೀ ಧೈರ್ಯ ತುಂಬಿದೆ
ನಾ ಸೋತೆನೆಂದು ಕೈ ಚೆಲ್ಲಿ ಕೂತೆ, ಆಗ ನೀ ಸ್ಥೈರ್ಯ ತುಂಬಿದೆ

ನೀ ಕಂಡ ಕನಸ ಮರೆತೆ,
ನಾ ಕಂಡ ಕನಸಿಗೆ ನೀರೆರೆದೆ
ನೀನಿಂದು ಇರುವೆ ಸಾವಿರಾರು ಮೈಲಿ ದೂರ,
ಅದರಿಂದ ಮಾನವಾಗಿದೆ ಭಾರ

ಆದರೂ ಗೆಲ್ಲಲೇ  ಬೇಕೆಂಬ ನಿನ್ನ ಪಾಠ,
ಮರೆಸುತಿದೆ ನನ್ನ ಈ ಪೀಕಲಾಟ

ನೋವಲ್ಲು ನಲಿವಲ್ಲು ಮೊದಲು ಬರುವ ಪದ ಅಮ್ಮಾ...
ಕೈ ತುತ್ತೂಟದಲ್ಲು ನೀನೆ ಕಾಣುವೆ ಅಮ್ಮಾ...
ಮನದ ಭಾವದಲ್ಲೂ ನೀನೆ ಇರುವೆ  ಅಮ್ಮಾ....
ನೀನಿಲ್ಲದ ಈ ಬದುಕು ಹೇಗೆ ತಾನೇ ಸಾಧ್ಯ ಅಮ್ಮಾ....



# ಅಮ್ಮಾ

*ಅನುರಾಧಾ*

ನವ ಮಾಸಗಳು ಗರ್ಭದಲಿ
ಮಗುವನಿರಿಸಿ ಪೋಷಿಸುವಳೀಕೆ
ಹುಟ್ಟದ ಕೂಸಿಗೆ ಮೊಲೆಯುಣಿಸಿ
ಸಾಕಿ ಸಾಲಹುವಳೀಕೆ (೧)
ಮನೆಯಲ್ಲಿ ಗುರುವಾಗಿ
ವಿದ್ಯೆ ಕಲಿಸುವಳೀಕೆ
ಸಮಾಜದಲಿ ಬಾಳಿ
ಬದುಕುವುದ ಕಲಿಸುವಳೀಕೆ (೨)
ಹಸಿವಾದಾಗ ಉಣ್ಣಲಿಕ್ಕಿಟ್ಟು
ಆಧರಿಸುವಳು ಈಕೆ
ತಪ್ಪುಗಳಾ ತಿದ್ದುತ್ತ , ಕೈ
ಹಿಡಿದು ನಡೆಸುವಳೀಕೆ (೩)
ಮಕ್ಕಳಾ ಯಶಸ್ಸಿಗೆ
ಹಗಲಿರುಳು ದುಡಿಯುವಳೀಕೆ
ಅವರ ಅಭಿವೃದ್ಧಿ ಕಂಡು
ಸಂಭ್ರಮಿಸುವಳು ಈಕೆ (೪)
ಸಂಸಾರಕ್ಕಾಗಿ ಜೀವನವ
ಸವೆಸುವಳು ಈಕೆ
ತನಗಾಗಿ ಏನನ್ನೂ
ಬಯಸುವುದಿಲ್ಲವೇಕೆ? (೫)
ಮಕ್ಕಳಾ ಹಡಿಯುವಾಗ
ಮರುಜನ್ಮ ಪಡಿಯುವಳೀಕೆ
ಇವಳ ತ್ಯಾಗಕ್ಕೆ ಸ್ತ್ರೀ ಎಂದರೆ ಸಾಕೆ?
"ಅಮ್ಮಾ" ಎಂದು ಕರೆಯಬಾರದೇಕೆ?





# ಕಾಣುವ ದೇವರು ಅಮ್ಮನಿಗೆ

ಬ ರಾ ಸುರೇಂದ್ರ

ನಾ ಕಂಡ ಕಾಣುತ್ತಿದ್ದ ಕಾಣುವ ದೇವರು ಅಮ್ಮನಿಗೆ

ಪಿಳಿ ಪಿಳಿ ಕಣ್ಣು ಬಿಟ್ಟಂದಿನಿಂದ ಇಂದಿನವರೆಗೆ

ಕಣ್ಣಲ್ಲಿ ಕಣ್ಣಿಟ್ಟು ಕಾಪಾಡಿದ ಜೀವಕೆ ನಮನ

ಜೀವ ತುಂಬಿದ ಮಾತೃ ಹೃದಯಕೆ ನಮನ

ನೀವು ಕಣ್ಮುಚ್ಚಿ ಮರೆಯಾಗಿ ಆಗಸದಾಚೆಗೆ ಹೋಗಿಬಿಟ್ಟಿರಲ್ಲ

ನಾವು ಕಣ್ಮುಚ್ಚಿದೊಡನೆ ಕಂಡಲ್ಲೆಲ್ಲಾ ಕಾಣುವಿರಲ್ಲ

ಸದಾ ಸುಖವ ಕರುಣಿಸಿ ಕಣ್ಣೀರ ದೂರಾಗಿಸಿ ನಗುವ ತುಂಬುವಿರಲ್ಲ

ನಮ್ಮ ಜೀವದಲ್ಲಿ ಜೀವವಾಗಿ ಬದುಕಲು ಕಲಿಸಿಹಿರಲ್ಲ

ಈ ವಿಶ್ವದ ಕಲ್ಮಷ ನೀಗಿಸಿ ಎಂದೂ ಸುಂದರವಾಗಿಸಿಹಿರಲ್ಲ

ನೀವೆಂದೂ ಏನನ್ನೂ ಬಯಸದೇ ನಮಗೆ ಕಾಮಧೇನುವಾದಿರಲ್ಲ

ನಿಮ್ಮ ಋಣ ಎಂದೆಂದೂ ತೀರಿಸಲಾಗಲಿಲ್ಲವಲ್ಲ



ಅಮ್ಮ ಅಮ್ಮ ಅಮ್ಮ ...ಈ ಮೊರೆಯೇ ನನ್ನ ಉಸಿರಲ್ಲೆಲ್ಲ

ನೀವು ಇಲ್ಲಿರಲಿ ಅಲ್ಲಿರಲಿ ಎಲ್ಲೇ ಇರಲಿ ಕೋಟಿ ನಮನಗಳು ನಿಮಗೆಲ್ಲ

ನಿಮ್ಮಾಸ್ಥಾನ ತುಂಬಿ ಮಕ್ಕಳ ಸುಖ ದುಃಖಕ್ಕೆ ಏಳ್ಗೆಗೆ ಶ್ರಮಿಸಿ ಹಗಳಿರುಳು

ಮಾದರಿ ಮಾತೃಗಳಾಗಿರುವ ಎಲ್ಲ ಅಮ್ಮಂದಿರುಗಳಿಗೆ ಅಮ್ಮನ ದಿನದ ಶುಭಾಶಯಗಳು



# ಎಂತಹ ಚಂದ ನಮ್ಮಮ್ಮ

ಸರಿತಾ ನಾಗಣ್ಣವರ್

*ಚಂದ ಚಂದ ಏನು ಚಂದ*
*ನೀನ್ನ ಕಂಗಳು ಏನು ಚಂದ*
*ಮೈಮರೆಸೋ ಕಂಗಳು*
*ಮಿರಿಮಿರಿ ಮಿಂಚುವ  ಕಂಗಳು*
*ಹುರಿದುಂಬುವ ಕಂಗಳು*
*ನೋವ ಮರಸೋ ಕಂಗಳು*
*ಮನಸಿಗೆ ಮುದ ನೀಡುವ ಕಂಗಳು*
*ಜಮದಗ್ನಿಯ ಕೋಪ ಶಮನ ಮಾಡುವ ಕಂಗಳು*
*ಸೃಷ್ಟಿಸಿದ ಬ್ರಹ್ಮನಿಗೆ ಕೋಟಿ ಕೋಟಿ ಸಾಲಾಮ್*
*ಚಂದ ಚಂದ ಏನು ಚಂದ*
*ನೀನ್ನ ಕಂಗಳು ಏನು ಚಂದ*



*ಚಂಚಲ ಚಿತ್ತ ಮನಸ್ಸು*
*ಭಾವನೆಗಳು ನದಿಯಂತೇ ಹರಿವುದು*
*ಒಮೆ ಶಾಂತವಾಗಿ ಚಲಿಸುತ್ದೇ*
*ಒಮೆ ಬೋರ್ಗವೇದು ಆರ್ಭಟಿಸಿ ಧುಮುಕುವೆ*
*ಒಮೆ ಯಾವ ಕಷ್ಟಕು ಹೆದರದೇ ಮುಣುಗುವೇ*
*ಒಮೆ ಯಾವ ಟೀಕೆಗೂ ಲೆಕ್ಕಿಸದೇ ಸಾಗುವೇ*
*ಕೊನೆಗೆ ಸಾಗರವೆಂಬ ಗುರಿಯ ಸೆರುವೇ*
*ಚಂಚಲ ಚಿತ್ತ ಮನಸ್ಸು*
*ಭಾವನೆಗಳು ನದಿಯಂತೇ ಹರಿವುದು*

*ಯಾವ ಚಿಂತೆಯಲ್ಲಿ  ಮುಳುಗಲ್ಲಿ ನನ್ನ ಮಂಥನ*
*ಮಂಥದಲ್ಲಿ ಯಾವ  ಚಿಂತೇ ಕೊರಗಲಿ*
*ಕೊರಗಲ್ಲಿ ಯಾವ ವಿಷಯ ಚುಚ್ಚಲಿ*
*ಚುಚ್ಚಲಿ ಯಾವ ವಿಷಯ ಕೊರಗಲಿ*
*ಕೊರಗಲಿ ಯಾವ ವಿಷಯ ಚಿಂತಿಸಲಿ*
*ಚಿಂತಿಸಲಿ ಯಾವ ಮಂಥದಲ್ಲಿ*
*ಮಂಥನದಲ್ಲಿ ಯಾವ ಚಿಂತೇ ಮುಳುಗಲ್ಲಿ*



# ಜಗದ ಮಾತೆಯರಿಗೊಂದು ನುಡಿ ನಮನ

*ಸತ್ಯನಾರಾಯಣ*

*ಬಸಿರಲಿ ಹೊತ್ತು ಉಸಿರ ಇತ್ತವಳೇ*
*ನೋವಿನಲು ನಗುತ ಹೆತ್ತವಳೇ*
*ನಾ ಅತ್ತಾಗ ಮಾತೆಯಾಗಿ ನಕ್ಕವಳೇ*
*ಮಮತೆಯಲಿ ಮಡಿಲೊಳು ಪೊತ್ತವಳೇ*

*ಹಾಲುಣಿಸಿ ಹರಿಸಿ ಹೆಸರನಿತ್ತವಳೇ*
*ಅನ್ನವಿಕ್ಕಿ ಅಕ್ಕರವ ಕಲಿಸಿದವಳೇ*
*ಪಾಲಿಸಿ ಪೋಷಿಸಿ ಬೆಳಸಿದವಳೇ*
*ಈ ಕಾಯಕ್ಕೆ ಕಲ್ಪ ಕೊಟ್ಟವಳೇ*

*ನಿನಗಾರಿಹರು ತಾಯೇ ಉಪಮೇ*
*ಅಂಬುಧಿಯೋ ಆಗಸವೋ ಧಾರುಣಿಯೋ*
*ಅನ್ಯರಾರಿಲ್ಲ ತಾಯೇ ನಿನಗೆ ಸಾಟಿ*
*ಈ ಜಗದಿ ನಿನಗೆ ನೀನೇ ಸರಿಸಾಟಿ*

*ಅಮ್ಮSS ಎನುವ ಎರಡಕ್ಷರದ ಮಾನ್ಯೆ*
*ಆವಿರ್ಭವಿಸಿದೆ ನಿನ್ನಲಿ ಅನಂತ ಭಾವ ಧನ್ಯೆ*
*ಅಮ್ಮ ಎನಲು ಮರೆಸುವುದೆಲ್ಲ ನೋವ*
*ನೀನೇ ಅಲ್ಲವೇ ತಾಯೇ ಪ್ರತ್ಯಕ್ಷ ದೈವ*

*ಜಗದೆಲ್ಲ ಜನ್ಮದಾತೆಯರಿಗೆ ಅಭಿನಂದನೆ*
*ಜಗನ್ಮಾತೆಗಿದೋ ನುಡಿ ನಮನ ವಂದನೆ*





# ಅಮ್ಮನ ನಗು

ಕಾವ್ಯ ಹೆಗ್ಡೆ, ೧೩ ವರ್ಷ ಟೊರೊಂಟೊ, ಕೆನಡಾ

## ಅಮ್ಮನ ನಗು

ಅಮ್ಮನ ನಗು ಎಲ್ಲೆಲ್ಲೂ
ಬೆಳಕು,
ಅಮ್ಮನ ಅಪ್ಪುಗೆ ನನಗೆ
ಬೆಚ್ಚಗೆ,
ಅಮ್ಮನ ಪ್ರೀತಿ ನನಗೆ
ಸ್ಫೂರ್ತಿ.
ಅಮ್ಮನ ನಗು ಕತ್ತಲಲ್ಲಿ
ಬೆಳಕು,
ಅಮ್ಮ ನೀನು ಇರು
ನನ್ನೊಟ್ಟಿಗೆ ಖುಷಿಯಾಗಿ.

ಹೆಸರು : ಕಾವ್ಯ ಹೆಗ್ಡೆ
ವಯಸ್ಸು : 13
ಟೊರೊಂಟೊ, ಕೆನಡಾ





# ಕೋಡುಬಳೆ

ಎಮ್ ಎಸ್ ಸರಸ್ವತಿ



**ರುಬ್ಬಿಕೊಳ್ಳಲು ಬೇಕಾಗುವ ಸಾಮಾಗ್ರಿಗಳು**

ತೆಂಗಿನ ಕಾಯಿ....ಒಂದು ಲೋಟ
ಜೀರಿಗೆ..............1TSp
ಒಣಮೆಣಸಿನಕಾಯಿ.....೧೦-೧೨ ಗುಂಟೂರು ೬ ಬ್ಯಾಡಿಗೆ
ಇಂಗು.....1/4 tsp
ಉಪ್ಪು ರುಚಿಗೆ ತಕ್ಕಷ್ಟು

ಮೇಲಿನ ಮಿಶ್ರಣವನ್ನು ಸ್ವಲ್ಪ ನೀರಿನಲ್ಲಿ ಗಟ್ಟಿ ಚಟ್ನಿ ಹದಕ್ಕೆ ರುಬ್ಬಿಕೊಳ್ಳುವುದು...

**ನಂತರ ಒಂದು ಪಾತ್ರೆಯಲ್ಲಿ**

ಅಕ್ಕಿ ಹಿಟ್ಟು.....2 ಲೋಟ
ಮೈದಾ ಹಿಟ್ಟು...1/2 ಲೋಟ
ಜೀರಿಗೆ... 1TSp
ರುಬ್ಬಿದ ಮಿಶ್ರಣ
ಎಣ್ಣೆ....1 ಸೌಟು

**ವಿಧಾನ**

ಮೊದಲು 2 ಲೋಟ ಅಕ್ಕಿ ಹಿಟ್ಟನ್ನು ಹಾಕಿ ಮಧ್ಯದಲ್ಲಿ ಮೈದಾ ಹಿಟ್ಟನ್ನು ಹಾಕಿ ಅದರ ಮೇಲೆ ಕಾದ ಎಣ್ಣೆ, ಜೀರಿಗೆ ಹಾಕಿ ಚೆನ್ನಾಗಿ ಬೆರಸಿ ನಂತರ ರುಬ್ಬಿದ ಚಟ್ನಿ ಬೆರಸಿ ನಾದುವ ಹದಕ್ಕೆ ಕಲೆಸಿಕೊಳ್ಳುವುದು.....ನೀರು ಬೇಕಿದ್ದಲ್ಲಿ ಸ್ವಲ್ಪ ಬೆರೆಸಿಕೊಳ್ಳಬೇಕು. ನಂತರ ಕೋಡುಬಳೆಯ ಆಕಾರದಲ್ಲಿ ನಾದಿ ಎಣ್ಣೆಯಲ್ಲಿ ಕರಿಯುವುದು.



# ಮಾವಿನ ಕಾಯಿ ಚಟ್ನಿ

ಶ್ರೀಪರ್ಣಿಕಾ

ಇದು ನನ್ನ ಅಮ್ಮನ ರುಚಿಯಾದ ಮಾವಿನಕಾಯಿ ಚಟ್ನಿ ರೆಸಿಪಿ, ಮಾವಿನಕಾಯಿ ಸೀಸನ್ ಇರುವವರೆಗೂ ನಮ್ಮ ಮನೆಯಲ್ಲಿ ಯಾವಾಗಲೂ ಮಾಡುವಂತಹ ಚಟ್ನಿ. ಮನೆ ಹಿತ್ತಲಿನ ಮಾವಿನ ಗಿಡದಲ್ಲಿ ಬೆಳೆದ ಮಾವಿನಕಾಯಿಂದ ಮಾಡಿದ ಚಟ್ನಿ ಇನ್ನೂ ರುಚಿಕರ.



**ಬೇಕಾಗುವ ಸಾಮಗ್ರಿಗಳು:**

1. ಮಾವಿನಕಾಯಿ - ೨
2. ಬ್ಯಾಡಗೀ ಮೆಣಸಿನಕಾಯಿ - ೧೨ ರಿಂದ ೧೫
3. ಬೆಲ್ಲ - ೧/೪ ಕಪ್
4. ಹಸಿಕಾಯಿ ತುರಿ - ೧/೨ ಕಪ್
5. ಎಣ್ಣೆ - ೧ ಟೇಬಲ್ ಚಮಚ
6. ಮೆಂತ್ಯ - ೧ ಟೀ ಚಮಚ
7. ಇಂಗು - ೧/೪ ಟೀ ಚಮಚ
8. ಅರಿಷಿಣ - ೧/೨ ಟೀ ಚಮಚ
9. ಉಪ್ಪು - ರುಚಿಗೆತಕ್ಕಷ್ಟು

**ವಿಧಾನ:**

- ಮಾವಿನಕಾಯಿಯ ಸಿಪ್ಪೆ ತೆಗೆದು ತುರಿದು ಅದಕ್ಕೆ ಬೆಲ್ಲ ಮತ್ತು ಉಪ್ಪನ್ನ ಹಾಕಿ ಕಲಸಿ ಒಂದು ಘಂಟೆಗಳ ಕಾಲ ಮುಚ್ಚಿ ಫ್ರೆಫ್ ನಲ್ಲಿ ಇಡಿ ಹೀಗೆ ಮಾಡುವದರಿಂದ ಅದು ನೀರನ್ನ ಬಿಡುತ್ತೆ ಹಾಗು ರುಬ್ಬಲು ಸುಲಭವಾಗುತ್ತೆ, ಈ ಚಟ್ನಿಗೆ ನೀರನ್ನ ಹಾಕಬಾರದು.
- ಈಗ ಒಂದು ಪಾತ್ರೆಯೆನ್ನು ಕಾಯಿಸಿ ಎಣ್ಣೆ ಹಾಕಿ ಮೆಂತ್ಯೆ, ಇಂಗು, ಅರಿಷಿಣ, ಬ್ಯಡಗೀ ಮೆಣಸಿನಕಾಯಿ ಹಾಕಿ ೫ ನಿಮಿಶ ಹುರಿದುಕೊಳ್ಳಿ
- ಆಮೇಲೆ ಅದಕ್ಕೆ ಹಸಿಕಾಯಿ ತುರಿ ಹಾಕಿ ೫ ನಿಮಿಷ ಮತ್ತೆ ಹುರಿದುಕೊಳ್ಳಿ.
- ಈಗ ಇದನ್ನು ಮಾವಿನಕಾಯಿ, ಬೆಲ್ಲ ಮತ್ತು ಉಪ್ಪಿನ ಮಿಷ್ರಣಕ್ಕೆ ಹಾಕಿ ಕಲಸಿ ರುಬ್ಬಿದರೆ ರುಚಿಯಾದ ಚಟ್-ಪಟಾ ಮಾವಿನಕಾಯಿ ಚಟ್ನಿ ಚಪಾತಿ, ಅನ್ನ, ದೊಸೆ, ಇಡ್ಲಿ, ಅವಲಕ್ಕಿ, ಉಪ್ಪಿಟ್ಟು ಜೊತೆ ಸವಿಯಲು ಸಿದ್ಧ.



# ನರಸಿಂಹ ಜಯಂತಿಯ ವಿಶೇಷತೆ

ಕಲಾವತಿ ಶೆಟ್ಟಿ, ಕತಾರ್

ನಮ್ಮ ದೇಶದಲ್ಲಿ ದಿನವೂ ಒಂದಲ್ಲ ಒಂದು ಹಬ್ಬ ವನ್ನು ಆಚರಿಸುತ್ತೇವೆ. ಹೀಗೆ ಆಚರಿಸುವ ಹಬ್ಬಗಳಲ್ಲಿ ನರಸಿಂಹ ಜಯಂತಿಯು ಒಂದು. ವಿಷ್ಣುವಿನ ದಶಾವತಾರ ಗಳಲ್ಲಿ ನರಸಿಂಹ ಅವತಾರವೂ ಒಂದು. ನರಸಿಂಹ ಜಯಂತಿಯ ಹಬ್ಬವನ್ನು ವೈಶಾಖ ಮಾಸದ ಶುಕ್ಲ ಪಕ್ಷದ ಚತುರ್ದಶಿಯಂದು ಎಲ್ಲರೂ ಅತ್ಯಂತ ಸಂಭ್ರಮ ಹಾಗೂ ಭಕ್ತಿಯಿಂದ ಆಚರಿಸುತ್ತಾರೆ. ನರಸಿಂಹ ಅವತಾರವು ವಿಷ್ಣುವಿನ ನಾಲ್ಕನೇ ಅವತಾರವೆಂದು ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ. ದೇವರ ಮುಖವು ಸಿಂಹದ ಹಾಗೆ ಹಾಗು ದೇಹ ಮನುಷ್ಯನ ಹಾಗೆ ಇರುವುದು ವಿಶೇಷ. ಎಲ್ಲರಿಗೂ ತಿಳಿದಂತೆ ನರಸಿಂಹ ದೇವರು ಸೂರ್ಯಾಸ್ತ ಸಮಯದಲ್ಲಿ ಚತುರ್ದಶಿ ದಿನದಂದು ಪ್ರತ್ಯಕ್ಷರಾಗಿರುವುದರಿಂದ ಪೂಜೆಯನ್ನು ಈ ವೇಳೆಯಲ್ಲಿ ಮಾಡಲಾಗುವುದು.
ನರಸಿಂಹ ದೇವರು ಹಿರಣ್ಯಕಶಿಪು ಎಂಬ ರಾಕ್ಷಸನನ್ನು ಕೊಂದಿದ್ದು ಈ ದಿನದ ವಿಶೇಷತೆ. ನರಸಿಂಹ ದೇವರ ಸಂದೇಶವೇನೆಂದರೆ ಎಲ್ಲರೂ ಅಧರ್ಮವನ್ನು ತೆಗೆದುಹಾಕಿ ಧರ್ಮದ ನೆಲೆಯಲ್ಲಿ ನಡೆಯುವುದು. ನಮ್ಮ ಹಿಂದಿನ ಪುರಾಣ ಮತ್ತು ಧರ್ಮಗ್ರಂಥಗಳಲ್ಲಿ ಉಲ್ಲೇಖಿಸಿರುವಂತೆ ವಿಷ್ಣು ದೇವರು ಧರ್ಮವನ್ನು ಮರುಸ್ಥಾಪನೆ ಮಾಡಲು ನರಸಿಂಹ ದೇವರ ಅವತಾರದಲ್ಲಿ ಬಂದು ಹಿರಣ್ಯಕಶಿಪು ಎಂಬ ರಾಕ್ಷಸನನ್ನು ಕೊಂದು ನಾಡಿನೆಲ್ಲೆಡೆ ಸುಖ -ಸಮೃದಿ, ಶಾಂತಿ ನೆಲೆಸಲು ಸಾಧ್ಯವಾಯಿತು ಎಂದು ಹೇಳಲಾಗುತ್ತಿದೆ.
ಹಿಂದೂಗಳ ಧರ್ಮಗ್ರಂಥಗಳ ಪ್ರಕಾರ "ಕಶ್ಯಪ ಮುನಿ" ಮತ್ತು "ದಿತಿ" ದಂಪತಿಗಳಿಗೆ ಹಿರಣ್ಯಕಶಿಪು ಮತ್ತು ಹಿರಣ್ಯಾಕ್ಷ ಎಂಬ ಹೆಸರಿನ ಇಬ್ಬರು ಗಂಡು ಮಕ್ಕಳಿದ್ದರು. ಆ ಸಮಯದಲ್ಲಿ ಹಿರಣ್ಯಾಕ್ಷ ಅಧರ್ಮ ದ ಹಾದಿಯಲ್ಲಿ ಸಾಗುತ್ತಿದ್ದು ಇದರಿಂದ ಎಲ್ಲರಿಗೆ ತೊಂದರೆಯಾಗುತ್ತಿತು. ಇದನ್ನು ಮನಗಂಡ ವಿಷ್ಣುದೇವರು "ವರಾಹ" ಅವತಾರದಲ್ಲಿ ಬಂದು ಹಿರಣಾಕ್ಷನನ್ನು ಕೊಂದು ಜಗತ್ತನ್ನು ದುಷ್ಟ ಶಕ್ತಿಯಿಂದ ಸಂರಕ್ಷಣೆ ಮಾಡಿದರು. ಇದರಿಂದ ಕೋಪಗೊಂಡ ಹಿರಣ್ಯಕಶಿಪು ನನ್ನ ಸೋದರನನ್ನು ಕೊಂದ ವಿಷ್ಣುವನ್ನು ಸಂಹರಿಸುವೆ' ಎಂದು ಅವನು ಪಣ ತೊಡುತ್ತಾನೆ. ಇದಕ್ಕಾಗಿ ಉಗ್ರ ತಪಸ್ಸು ಕೈಗೊಳ್ಳುತ್ತಾನೆ. ಬ್ರಹ್ಮ ಅವನಿಗೆ ವರ ಬೇಡಲು ಹೇಳುತ್ತಾನೆ. `ನನಗೆ ಸಾವೇ ಬೇಡ.  ಅಮರತ್ವ ಕೊಡು' ಎಂದು ರಾಕ್ಷಸ ಕೇಳಿದ! ಬ್ರಹ್ಮ ಅದಕ್ಕೆ ಒಪ್ಪುವುದಿಲ್ಲ. `ಹಾಗೆಲ್ಲ ಸಾವೇ ಇಲ್ಲದಂತೆ ವರ ಕೊಡಲಾಗದು. ಬೇರೆ ಯಾವ ವರವನ್ನಾದರೂ ಕೇಳು' ಎಂದ. ಆಗ ರಾಕ್ಷಸ ಜಾಣತನ ತೋರಿಸಿದ. `ಮಾನವ ಅಥವಾ ಮೃಗದಿಂದ, ಹಗಲು ಅಥವಾ ರಾತ್ರಿ, ಮನೆ ಒಳಗೆ ಅಥವಾ ಹೊರಗೆ ಮತ್ತು ಶಸ್ತ್ರ ಅಥವಾ ಅಸ್ತ್ರದಿಂದ ನನಗೆ ಸಾವು ಬೇಡ' ಎಂದು ಕೇಳಿದ. ಅದರಂತೆಯೇ ಬ್ರಹ್ಮ ವರ ನೀಡಿದ. `ಸದ್ಯ, ನನಗೆ ಸಾವೇ ಇಲ್ಲ'  ಎಂದು ಹಿರಣ್ಯಕಶಿಪು ಖುಷಿಪಟ್ಟುಕೊಂಡ.
ಹಿರಣ್ಯಕಶಿಪು ದಿನೇ ದಿನೇ ಪ್ರಬಲನಾಗುತ್ತಿದ್ದ. ದೇವತೆಗಳಿಗೆ ತುಂಬ ಕಾಟ ಕೊಡುತ್ತಿದ್ದ. ಅವನ ಹಿಂಸೆ ತಾಳಲಾರದೆ ದೇವತೆಗಳು ವಿಷ್ಣುವಿನ ಬಳಿಗೆ ಬರುತ್ತಾರೆ. `ಈ ರಾಕ್ಷಸನ ಕಾಟ ತಾಳಲಾಗುತ್ತಿಲ್ಲ. ನಮ್ಮನ್ನು ರಕ್ಷಿಸು'  ಎಂದು ಬೇಡುತ್ತಾರೆ. `ಭಯ ಪಡಬೇಡಿ. ಸೂಕ್ತ ಕಾಲದಲ್ಲಿ ನಾನು ಹಿರಣ್ಯಕಶಿಪುವನ್ನು ಸಂಹರಿಸುತ್ತೇನೆ'  ಎಂದು ಭಗವಂತನು ಅವರಿಗೆ ಆಶ್ವಾಸನೆ ನೀಡಿದ.

ಹಿರಣ್ಯಕಶಿಪುವಿಗೆ ವಿಷ್ಣು ಮತ್ತು ಅವನ ಭಕ್ತರನ್ನು ಕಂಡರಾಗುತ್ತಿರಲಿಲ್ಲ. ನನ್ನ ಸೋದರನನ್ನು ಕೊಂದ ವಿಷ್ಣು ನನ್ನ ಶತ್ರು. ಅವನನ್ನು ಹೇಗಾದರೂ ಕೊಲ್ಲುವೆ' ಎನ್ನುತ್ತಿದ್ದ. `ನಾನು ವಿಷ್ಣುವಿಗಿಂತ ಹೆಚ್ಚು ಶಕ್ತಿಶಾಲಿ' ಎಂದು ಸೊಕ್ಕಿನಿಂದ ಹೇಳುತ್ತಿದ್ದ. ಅಷ್ಟೇ ಅಲ್ಲ, `ವಿಷ್ಣುವನ್ನು ಪೂಜಿಸಬೇಡಿ. ನನ್ನನ್ನೇ ಪೂಜಿಸಿ' ಎಂದು ಆದೇಶಿಸಿದ್ದ. ಇಂತಹ ಅಸುರನ ಮಗನಾಗಿ ಪ್ರಹ್ಲಾದ ಹುಟ್ಟಿದ. ಹಿರಣ್ಯಕಶಿಪುವಿನ ಪತ್ನಿ ಕಯಾದು. ಹಿರಣ್ಯಕಶಿಪು ತಪಸ್ಸು ಆಚರಿಸುತ್ತಿದ್ದಾಗ ಅವಳು ನಾರದ ಮುನಿಗಳ ಆಶ್ರಮದಲ್ಲಿದ್ದಳು. ಆಗ ಪ್ರಹ್ಲಾದನಿಗೆ ಜನ್ಮನೀಡಿದಳು. ನಾರದರು ಹೇಳುತ್ತಿದ್ದ ಶ್ರೀಮನ್ ನಾರಾಯಣನ ಕತೆಯನ್ನು ಕೇಳುತ್ತ ಪ್ರಹ್ಲಾದ ಬಾಲ್ಯದಿಂದಲೇ ವಿಷ್ಣುಭಕ್ತನಾದ. ಮುಂದೆ ಗುರುಕುಲದಲ್ಲಿಯೂ ತನ್ನ ಸಹಪಾಠಿಗಳಿಗೆ `ಭಗವಂತನನ್ನು ಪೂಜಿಸಿ' ಎಂದು ಉಪದೇಶ ನೀಡುತ್ತಿದ್ದ. ಇದರಿಂದಾಗಿ ಗುರುಕುಲದಲ್ಲಿದ್ದ ರಾಕ್ಷಸ ಪುತ್ರರೂ ಭಗವಂತನಲ್ಲಿ ಭಕ್ತಿ ತೋರುತ್ತಿದ್ದರು. ಇದರಿಂದ ಗಾಬರಿಯಾದ ಗುರುಗಳು ಹಿರಣ್ಯಕಶಿಪುವಿನ ಬಳಿ ಹೋಗಿ ಪ್ರಹ್ಲಾದನ ಬಗೆಗೆ ದೂರುತ್ತಿದ್ದರು. ಇದನ್ನು ಕೇಳಿ ಹಿರಣ್ಯಕಶಿಪು ಕೆರಳಿದ. ` ನನ್ನ ಈ ಮಗನನ್ನೇ ಕೊಲ್ಲಿ' ಎಂದು ಆಜ್ಞಾಪಿಸಿದ.  ನಾನಾ ರೀತಿ ಪ್ರಯತ್ನಿಸಿದರೂ ಪ್ರಹ್ಲಾದನನ್ನು ಕೊಲ್ಲುವುದು ಸಾಧ್ಯವಾಗುವುದಿಲ್ಲ.

`ನಾನು ಭಗವಂತನಿಗಿಂತ ದೊಡ್ಡವನು' ಎಂದು ಈ ರಾಕ್ಷಸ ರಾಜ ಸದಾ ಹೇಳುತ್ತಿದ್ದ. ಆಗ ಪ್ರಹ್ಲಾದನು ತನ್ನ ತಂದೆಗೆ ಹೇಳಿದ: `ರಾಜನಾದ ಹಿರಣ್ಯಕಶಿಪು, ನೀನು ದೇವರಲ್ಲ. ಭಗವಂತನಾದರೋ ಸರ್ವವ್ಯಾಪಿ ಮತ್ತು ಸರ್ವಶಕ್ತ. ಅವನಿಗೆ ಸರಿಸಮಾನರಾಗಲೀ ಅವನಿಗಿಂತ ಶ್ರೇಷ್ಠರಾದವರಾಗಲೀ ಯಾರೂ ಇಲ್ಲ. ಆದುದರಿಂದ ಭಗವಂತನಿಗೆ ಶರಣಾಗು.' ಪ್ರಹ್ಲಾದನ ಮಾತು ಕೇಳಿ ಹಿರಣ್ಯಕಶಿಪುವಿಗೆ ಇನ್ನಷ್ಟು ಕೋಪ. ಅವನನ್ನು ಕೆಣಕಲು ಕೇಳುತ್ತಾನೆ, `ನಿನ್ನ ನಾರಾಯಣ ಈ ಅರಮನೆ ಕಂಬದಲ್ಲಿ ಇದ್ದಾನೆಯೇ?' `ಭಗವಂತನು ಎಲ್ಲೆಲ್ಲೂ ಇರುವುದರಿಂದ ಕಂಬದಲ್ಲಿಯೂ ಇದ್ದಾನೆ' ಎಂದು ಪ್ರಹ್ಲಾದ ಉತ್ತರಿಸಿದ. `ಹಾಗಾದರೆ ನೋಡೇ ಬಿಡುವ' ಎಂದು ಹಿರಣ್ಯಕಶಿಪು ತಿರಸ್ಕಾರದಿಂದ ಆ ಕಂಬವನ್ನು ಗುದ್ದಿದ. ಆಗ ಕಂಬದಿಂದ ಭಾರೀ ಶಬ್ದ ಹೊರಬಂದಿತು. ಪ್ರಹ್ಲಾದನ ಮಾತು ನಿಜವಾಯಿತು. ವಿಷ್ಣುವು ತನ್ನ ಅದ್ಭುತವಾದ ನರಸಿಂಹಾವತಾರದಲ್ಲಿ -ಅರ್ಧ ಸಿಂಹ, ಅರ್ಧ ಮನುಷ್ಯನ ಅವತಾರದಲ್ಲಿ- ಹೊರಬಂದನು.  ಭಗವಂತನ ಈ ವಿಶೇಷವಾದ

ರೂಪವನ್ನು ಕಂಡು ಹಿರಣ್ಯಕಶಿಪು ಒಳಗೊಳಗೇ ಬೆದರಿದ. ಇದು ತನ್ನ ಸಾವಿಗೇ ಎಂದು ಶಂಕಿಸಿದ. ಹೀಗಾಗಿ ಅವನು ನೃಸಿಂಹನೊಡನೆ ಹೋರಾಡಲು ಸಿದ್ಧವಾದ. ಕೆಲಕಾಲ ಭಗವಂತನು ಆ ರಾಕ್ಷಸನೊಡನೆ ಕಾದಾಡಿದ. ಅನಂತರ ಮುಸ್ಸಂಜೆಯಲ್ಲಿ ಭಗವಂತನು ರಾಕ್ಷಸನನ್ನು ಬಲವಾಗಿ ಹಿಡಿದು ತನ್ನ ತೊಡೆಯ ಮೇಲೆ ಎಳೆದುಕೊಂಡ. ಅನಂತರ ತನ್ನ ಉಗುರುಗಳಿಂದ ಅವನ ಹೊಟ್ಟೆಯನ್ನು ಸೀಳಿ ಕೊಂದು ಹಾಕಿದ.

ರಾಕ್ಷಸನ ಸಂಹಾರ ಮಾಡಿದ ಮೇಲೆ ಕೂಡ ನೃಸಿಂಹನ ಕೋಪ ಶಮನವಾಗಿರಲಿಲ್ಲ. ಅವನು ಗರ್ಜಿಸುತ್ತಾ ಹಿರಣ್ಯಕಶಿಪುವಿನ ಸಿಂಹಾಸನದ ಮೇಲೆ ಆಸೀನನಾದ. ಯಾರು ಎಷ್ಟೇ ಪ್ರಯತ್ನಿಸಿದರೂ  ಅವನ ಕೋಪ ಇಳಿಯಲಿಲ್ಲ. ಆಗ ಪ್ರಹ್ಲಾದನು ಕೊಂಚವೂ ಹೆದರದೆ ನೃಸಿಂಹನ ಮುಂದೆ ಬಂದು ಭಕ್ತಿಪೂರ್ವಕವಾಗಿ ನಮಸ್ಕರಿಸಿದ. ತನ್ನ ಭಕ್ತನ ಬಗ್ಗೆ ವಿಶೇಷ ಪ್ರೀತಿ ವಾತ್ಸಲ್ಯಗಳಿದ್ದ ನೃಸಿಂಹನು ಅವನ ತಲೆಯ ಮೇಲೆ ತನ್ನ ದಿವ್ಯ ಹಸ್ತವನ್ನು ಇರಿಸಿದ. ಪ್ರಹ್ಲಾದನು ಭಗವಂತನನ್ನು ಸ್ತುತಿಸಿ, ಭಕ್ತಿ ಅರ್ಪಿಸಿ ಕರುಣೆ ಯಾಚಿಸಿದ. ಆಗ ದೇವನು ಶಾಂತನಾದ. ಇಂತಹ ವಿಷ್ಣು ಭಕ್ತ ಪ್ರಹ್ಲಾದನಿಗೆ ನಮಿಸೋಣ . ನರಸಿಂಹ ಜಯಂತಿಯ ದಿನ ನರಸಿಂಹ ಮತ್ತು ಲಕ್ಷ್ಮೀದೇವಿಗೆ ವಿಶೇಷ ಪೂಜೆಯನ್ನು ಮಾಡಲಾಗುತ್ತದೆ. ಭಕ್ತಾದಿಗಳು ಬೆಳಿಗ್ಗೆ ಬೇಗ ಎದ್ದು ಸ್ನಾನ ಮಾಡಿ  ಹೊಸ ಬಟ್ಟೆ ಧರಿಸಿ ದೇವರಿಗೆ ಹೂ ಹಣು ಸಮಪಿಸಿ ತಮ್ಮ ಭಕ್ತಿಯನ್ನು ಮೆರೆಯುತ್ತಾರೆ.

ಈ ವರ್ಷ ಮೇ ೬ ರಂದು ನರಸಿಂಹ ಜಯಂತಿಯ ಆಚರಣೆಯಲ್ಲಿ  ಪಾಲ್ಗೊಳ್ಳುವ ಶುಭ ಸಂದರ್ಭ ನನ್ನ ಪೂಜ ಗುರುಗಳ ಮೂಲಕ ಒದಗಿಬಂದಿತು. ಪುಟ್ಟ ಮಕ್ಕಳು ಕೂಡಾ ನರಸಿಂಹ ದೇವರ ಮಹಿಮೆಯನ್ನು ಬಣ್ಣಿಸುತಿದ್ದರು. ನಾವು ಹಾಡಿದ ನರಸಿಂಹ ಪುರಾಣದಿಂದ ಆಯ್ದ ಒಂದು ಭಜನೆಯ ಸಾಲುಗಳನ್ನು ನಿಮ್ಮ ಮುಂದಿಡಲು ಇಚ್ಚಿಸುತ್ತೇನೆ



ಪದ್ಯದ ಹೆಸರು : Namaste Narasimhaya
Official name :Nrsimha Pranama
ಪುಸ್ತಕದ ಹೆಸರು: Nrsimha purana

ಬರೆದವರು :vyasadeva

ಭಾಷೆ : ಸಂಸ್ಕೃತ

*(1)*

*namas te narasiṁhāya*
*prahlādāhlāda-dāyine*
*hiraṇyakaśipor vakṣaḥ-*
*śilā-ṭaṅka-nakhālaye*
*(2)*

*ito nṛsiṁhaḥ parato nṛsiṁho*
*yato yato yāmi tato nṛsiṁhaḥ*
*bahir nṛsiṁho hṛdaye nṛsiṁho*
*nṛsiṁham ādiṁ śaraṇaṁ prapadye*

*(3)*

*tava kara-kamala-vare nakham adbhuta-śṛṅgaṁ*
*dalita-hiraṇyakaśipu-tanu-bhṛṅgam*
*keśava dhṛta-narahari-rūpa jaya jagadīśa hare*


.

ಬಂಧುಗಳೇ, ಹೀಗೆ ನರಸಿಂಹ ದೇವರ ಮಹಿಮೆಯನ್ನು ವರ್ಣಿಸಲು ಅಸಾಧ್ಯ. ಎಲ್ಲರಿಗೂ ಶ್ರೀ ನರಸಿಂಹ ದೇವರು ಆಯುರಾರೋಗ್ಯ, ಐಶ್ವರ್ಯ ಕೊಟ್ಟು ಹರಸಲಿ ಎಂದು ಪ್ರಾರ್ಥಿಸುತ್ತೇನೆ.

*ಸರ್ವೇ ಭವಂತು ಸುಖಿನಾ:ಸರ್ವೇ ಸಂತು ನಿರಾಮಯ:*
*ಸರ್ವೇ ಭದ್ರಾಣಿ ಪಶ್ಯಂತು:ಮಾ ಕಶ್ಚಿದ್ ದು:ಖಭಾಗ್ ಭವೆತು:*
*ಓಂ ಶಾಂತಿ, ಶಾಂತಿ, ಶಾಂತಿ.*

# ಚೆಣ್ಣರ ಚಿತ್ತಾರ






ಅಕ್ಷರ






ಕಾವ್ಯ







ಶ್ರೇಯ







ಸಿರಿ





ಸಾರ್ಥಕ್





ಅನ್ವಿತಾ







ಶ್ರೀ ವರ್ಣಿಕಾ




# ಛಾಯಾಚಿತ್ರ

ಉಷಾ ಬಸ್ರೂರ್









**ಚಿತ್ರ ಕೃಪೆ : ಉಷಾ ಬಸ್ರೂರ್**

**ಪ್ರಕಾಶಕರು:**

ಬೃಂದಾವನ ಕನ್ನಡ ಸಂಘ

501(3)(c) ಪಡೆದ ಚಾರಿಟಿ ಸಂಸ್ಥೆ

Karnataka Cultural Organization (KCO) Brindavana
New Jersy, USA

www.Brindavana.org

© 2020. All right reserved. No part of this newsletter may be reproduced, photocopied, or reused without prior permission from the publisher.

ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು ಹಾಗೂ ಮಾಹಿತಿಗಳೆಲ್ಲವುಗಳಿಗೆ ಅವುಗಳ ಲೇಖಕರೇ ಜವಾಬ್ದಾರರು. ಅಂಕಣದಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ "ಬೃಂದಾವನ ವಾಣಿ" ಮತ್ತು ಬೃಂದಾವನ ಕನ್ನಡ ಕೂಟ ಜವಾಬ್ದಾರರಲ್ಲ. ಚಿತ್ರ ಕೃಪೆ ಅಂತರ್ಜಾಲ/ಲೇಖಕರು


ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: vani@brindavana.org

**ಸದಸ್ಯತ್ವ ಮಾಹಿತಿ:**

ಬೃಂದಾವನ ಕನ್ನಡ ಸಂಸ್ಥೆ, ನ್ಯೂ ಜೆರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಚಾರಿಟೆಬಲ್ ಸಂಸ್ಥೆ. ನ್ಯೂ ಜೆರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡತನವನ್ನು ಬೆಳೆಸಿ, ಪೋಷಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ನೀವು ಈಗಾಗಲೇ ಸದಸ್ಯರಾಗಿ ನೋಂದಾಯಿತರಾಗಿರದಿದ್ದಲ್ಲಿ ದಯವಿಟ್ಟು ಸದಸ್ಯರಾಗುವಂತೆ ಈ ಮೂಲಕ ಕೋರುತ್ತಿದ್ದೇವೆ. ವಾರ್ಷಿಕ, ದ್ವೈವಾರ್ಷಿಕ, ಅಜೀವ ಮತ್ತು ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.

www.brindavana.org ಅನ್ನ್ ವಿಸಿಟ್ ಮಾಡಿ, ನಿಮ್ಮ ವಿವರಗಳನ್ನು ನೀಡಿ ಸದಸ್ಯತ್ವವನ್ನು ಪಡೆಯಿರಿ. ನಿಮ್ಮ ದೇಣಿಗೆ ಟ್ಯಾಕ್ಸ್ ರಹಿತ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: info@brindavana.org


ಬೃಂದಾವನ
ಪ್ರೀತಿಯ ನಾಡೋಜನಿಗೆ
ಹೃದಯಪೂರ್ವಕ ವಿದಾಯ